ಸಭೆ, ಸಮಾರಂಭ, ಜಾತ್ರೋತ್ಸವ, ನೇಮೋತ್ಸವ, ಮದುವೆ ಹಾಗೂ ಇನ್ನಿತರ ಕಾರ್ಯಕ್ರಮಗಳ
ನೇರಪ್ರಸಾರ
ಮಾಡಲು ನಮ್ಮನ್ನು ಸಂಪರ್ಕಿಸಿ
ಮೊ: 9449387044, 9481741055
9980344970, 9164625996

ಅಮರ ಸುಳ್ಯ ಸುದ್ದಿ

AMARA SULLIA SUDDHI

ಸುಳ್ಯದ ಜನಪರ ಕನ್ನಡ ವಾರಪತ್ರಿಕೆ

Regd.No.PTR/126/2022-24
Licenced to Post under WPP
No. SK/WPP/PTR/156/2022-24

ಸಭೆ, ಸಮಾರಂಭ, ಜಾತ್ರೋತ್ಸವ, ನೇಮೋತ್ಸವ, ಮದುವೆ ಹಾಗೂ ಇನ್ನಿತರ ಕಾರ್ಯಕ್ರಮಗಳ
ನೇರಪ್ರಸಾರ
ಮಾಡಲು ನಮ್ಮನ್ನು ಸಂಪರ್ಕಿಸಿ
ಮೊ: 9449387044, 9481741055
9980344970, 9164625996

ಪ್ರಧಾನ ಸಂಪಾದಕರು : ಮುರಳೀಧರ ಅಡ್ಡನಪಾರೆ Email: amarasuddi@gmail.com Website : www.amarasuddi.com

Mob : 9449387044, Off. : 7338248044
Facebook : Amarasullia Suddi

RNI No. KAR KAN / 2012/ 49234 | ಸಂಪುಟ –16 | ಸಂಚಿಕೆ – 05 | 2024 ಮೆ.03ರಿಂದ ಮೆ.09ರವರೆಗೆ | Posted at SULLIA M.D.G. ON 03.05.2024 | ಪುಟ–6 | ಬೆಲೆ: ರೂ. 4.00

ತಾಲೂಕಿನಾದ್ಯಂತ ಶಾಂತಿಯುತ ಮತದಾನ ಜಿಲ್ಲೆಯಲ್ಲಿ ಮತದಾನ ಪ್ರಮಾಣದಲ್ಲಿ ಮೊದಲ ಸ್ಥಾನ ಪಡೆದ ಸುಳ್ಯ

ಸುಳ್ಯ ತಾಲೂಕಿನಾದ್ಯಂತ ನಡೆದ ಲೋಕ ಸಭಾ ಚುನಾವಣೆಯ ಶಾಂತಿಯುತವಾಗಿ ನಡೆಯಿತು. ಸುಳ್ಯದಲ್ಲಿ ಶೇ.83.01 ಮತದಾನ ವಾಗಿದೆ. ಪುರುಷರು 87565 ಹಾಗೂ 85789 ಪುರುಷರು ಮತ ಚಲಾವಣೆ ಮಾಡಿದ್ದಾರೆ. ತಾಲೂಕಿನಲ್ಲಿ ಒಟ್ಟು 208853 ಮತದಾರರಿದ್ದು, 173354 ಮತದಾರರು ತಮ್ಮ ಹಕ್ಕು ಚಲಾಯಿಸಿದ್ದಾರೆ. ಶೇ 83.01 ಫಲಿತಾಂಶ ಪ್ರಕಟವಾಗಿದೆ. ಮಹಿಳಾ ಮತದಾರರೇ ಹೆಚ್ಚು ಮತದಾನ ಮಾಡಿದ್ದಾರೆ.

ಸುಳ್ಯಕ್ಕೆ ಗಗನ ಕುಸುಮವಾಗಲಿದೆಯಾ 110 ಕೆ.ವಿ, 2025 ನವೆಂಬರ್‌ಗೆ ಪೂರ್ಣಗೊಳ್ಳುವುದೇ ಕಾಮಗಾರಿ?

ಹಲವಾರು ವರ್ಷಗಳಿಂದ ನೆನೆಗುದಿಗೆ ಬಿದ್ದಿದ್ದ 110 ಕೆ.ವಿ ಕಾಮಗಾರಿ ಆರಂಭಗೊಂಡಿದ್ದು ಇದೀಗ ಮತ್ತೆ ಅಡೆ ತಡೆಗಳು ವಿಘ್ನಗಳು ಎದುರಾಗಿವೆ.

ಸುಳ್ಯದ 110 ಕೆ.ವಿ.ಯು ಕೆ.ಪಿ.ಟಿ.ಸಿ.ಎಲ್. ಮೂಲಕ ಕೆಲಸ ಪ್ರಾರಂಭಿಸಿ ಈ ಯೋಜನೆಗೆ ವಿದ್ಯುತ್ ತಂತಿಗಳು ಹಾದು ಹೋಗಲು ಸುಮಾರು 89 ಟವರುಗಳ ನಿರ್ಮಾಣವಾಗಬೇಕಿದೆ. ಆದರೆ ಇದೀಗ 87 ಟವರ್‌ಗಳ ನಿರ್ಮಾಣಕ್ಕೆ ತೆರಳಿದಾಗ ಅಡೆತಡೆಗಳು ಉಂಟಾಗಿದ್ದು ಕೇವಲ 2 ಟವರ್‌ಗಳ ನಿರ್ಮಾಣ ಮಾಡಲು ಮಾತ್ರವೇ ಅವಕಾಶ ಸಿಕ್ಕಿದಂತಾಗಿದೆ. ಇತ್ತ ಅರಣ್ಯ ಇಲಾಖೆಗೆ ಸರಕಾರ ಬೇರೆ ಕಡೆಯಲ್ಲಿ ಸ್ಥಳ ಗುರುತಿಸಿ ನೀಡಲಾಗಿದೆ ಎಂದು ಪ್ರತಿನಿಧಿಗಳು ತಿಳಿಸಿದ್ದರು ಇದೀಗ ಅರಣ್ಯ ಇಲಾಖೆಯು ಮೊದಲು ಖಾಸಗಿಯಲ್ಲಿ ಮಾಡಿ ಬನ್ನಿ ಮತ್ತೆ ನಾವು ಬಿಡುತ್ತೇವೆ ಎಂದು ಗುತ್ತಿಗೆದಾರರು ಮತ್ತು ಕಾರ್ಮಿಕರಲ್ಲಿ ಖ್ಯಾತೆ ತೆಗೆಯುತ್ತಿದೆ. ಖಾಸಗಿ ಜಮೀನು ಮಾಲಕರುಗಳು ಸರಕಾರಿ ಅರಣ್ಯದಲ್ಲಿ ಹಾದು ಹೋಗುವ ಕೆಲಸವನ್ನು ಮಾಡಿ ಬನ್ನಿ ಎಂದು ಹೇಳುತ್ತಿದ್ದು, ಇವೆಲ್ಲಾವನ್ನು ಇತ್ಯರ್ಥ ಪಡಿಸಿ 110 ಕೆ.ವಿ. ಸುಳ್ಯ ತಲುಪಲು ಕನಿಷ್ಠ ಎಷ್ಟು ವರ್ಷಗಳು ಕೆಪಿಟಿಸಿಎಲ್ ಬೇಕಾಗಬಹುದು ಎಂದು ತಿಳಿಯುತ್ತಿಲ್ಲ.

ಮಾಡಾವು, ಪಾಲ್ತಾಡಿ, ಜಾಲ್ಸೂರು, ಮಾರ್ಗವಾಗಿ ಲೈನ್ ಗಳು ಬರುತ್ತಿದ್ದು ಇಲ್ಲಿ ಖಾಸಗಿ ವ್ಯಕ್ತಿಗಳು ಯಾವುದೇ ಪತ್ರಮುಖೇನೆ ಅರ್ಜಿಗಳನ್ನು ನೀಡದೆ ಕಾಮಗಾರಿಗೆ ತಡೆ ಒಡ್ಡುತ್ತಿದ್ದು ಮೂರು ತಿಂಗಳುಗಳಿಂದ ಲೈನ್ ಕಾಮಗಾರಿಯು ನಿಂತಿದ್ದು ಇದೀಗ ಸುಳ್ಯದ ಕಛೇರಿ ಬಳಿಯ ಕೆಲಸಗಳು ಮಾತ್ರ ಭರದಿಂದ ನಡೆಯುತ್ತಿದೆ. ಈ ಕಾಮಗಾರಿಯು ಗುತ್ತಿಗೆ ದಾರರಿಗೆ ನವೆಂಬರ್ 2025ರ ಒಳಗಾಗಿ ಕಾಮಗಾರಿ ಮುಗಿಸಬೇಕಾಗಿದ್ದು ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಾಗಿರುವುದರಿಂದ ಜನಪ್ರತಿನಿಧಿಗಳ ಜೋತೆಗೆ ಸಭೆ ನಡೆಸಲು ಮತ್ತು ಪರಿಹಾರ ಮಾರ್ಗವನ್ನು ಕಂಡುಕೊಳ್ಳಲು ಸಾಧ್ಯವಾಗಿಲ್ಲ. ಮುಂದಿನ ದಿನಗಳಲ್ಲಿ ಜಿಲ್ಲಾಧಿಕಾರಿಗಳ ಗಮನಕ್ಕೆ ತರುತ್ತೇವೆ ಅಲ್ಲದೆ ಕೆಪಿಟಿಸಿಎಲ್ ಅಧಿಕಾರಿಗಳು ಜನರನ್ನು ಭೇಟಿಯಾಗಿ 110ಕೆ.ವಿ. ಬಗ್ಗೆ ಮಾಹಿತಿ ನೀಡಿ ಮನವೊಲಿಸುತ್ತೇವೆ, ಅದು ಸಾಧ್ಯವಾಗದ ಪಕ್ಷದಲ್ಲಿ ಪೊಲೀಸ್ ನೆರವು ಪಡೆದು ಬದ್ರತೆಯೊಂದಿಗೆ ಕಾಮಗಾರಿಯನ್ನು ನಡೆಸುತ್ತೇವೆ ಜನರು ತಮ್ಮ ಅನುಕೂಲಕ್ಕಾಗಿ ಮಾಡುತ್ತಿರುವ ಈ ಕಾಮಗಾರಿಗೆ ಈ ರೀತಿಯಲ್ಲಿ ತೊಂದರೆ ನೀಡುವುದು ಸರಿಯಲ್ಲ ನಮ್ಮ ಜೊತೆಗೆ ಕೈ ಜೋಡಿಸಿ ಕಾಮಗಾರಿ ಪೂರ್ಣಗೊಳಿಸಲು ನಿಮ್ಮ ಸಹಕಾರವು ಬೇಕು ಎಂದು ಎಕ್ಸಿಕೇಟಿವ್ ಎಂಜಿನಿಯರ್ ಗಂಗಾಧರ ಅಮರ ಸುಳ್ಯ ಸುದ್ದಿಗೆ ಮಾಹಿತಿ ನೀಡಿದರು.

ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ವಿಧಿ ವಿಧಾನಗಳಲ್ಲಿ ಮಿಂದೆದ್ದ ಮಂಡೆಕೋಲು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನ

ಭಕ್ತಿ ಭಾವದಿಂದ ಪಾಲ್ಗೊಂಡು ಅಪೂರ್ವ ಕ್ಷಣಗಳನ್ನು ಕಣ್ತುಂಬಿಕೊಂಡ ಭಕ್ತಾದಿಗಳುಸುಳ್ಯ: ತಾಲೂಕಿನ ಮಂಡೆಕೋಲು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದಲ್ಲಿ ಬುಧವಾರ ಬೆಳಿಗ್ಗೆ ಶ್ರೀ ದೇವರ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವ ಕಾರ್ಯಕ್ರಮ ನೆರವೇರಿತು.

ಹಲವು ದಿನಗಳಿಂದ ಕಾತರ, ಕುತೂಹಲ ಹಾಗೂ ಭಕ್ತ ಭಾವದಿಂದ ಕಾಯುತ್ತಿದ್ದ ಕ್ಷಣಗಳಿಗೆ ಕೊನೆಗೂ ಮುಹೂರ್ಯ ಕೂಡಿ ಬಂದಿತು. ಬೆಳಿಗ್ಗೆ 10.18 ರ ಮಿಥುನ ಲಗ್ನ ಸುಮುಹೂರ್ತದಲ್ಲಿ ಮಹಾವಿಷ್ಣುಮೂರ್ತಿ ದೇವರ ಪುನಃ ಪ್ರತಿಷ್ಠಾ ಕಾರ್ಯಕ್ರಮ ನೆರವೇರಿತು. ಕ್ಷೇತ್ರದ ತಂತ್ರಿಗಳಾದ ವೇದಮೂರ್ತಿ ಬ್ರಹ್ಮಶ್ರೀ ಕುಂಟಾರು ವಾಸುದೇವ ತಂತ್ರಿಗಳು ಹಾಗೂ ವೇದಮೂರ್ತಿ ಬ್ರಹ್ಮಶ್ರೀ ಕುಂಟಾರು ರವೀಶ್ ತಂತ್ರಿಗಳ ನೇತ್ರತ್ವದಲ್ಲಿ ಈ ಪ್ರತಿಷ್ಠಾ ವಿಧಿ, ವಿಧಾನಗಳು ನೆರವೇರಿದವು.

ಇದೇ ವೇಳೆ ದೇಗುಲದಲ್ಲಿ ನೂತನವಾಗಿ ಪ್ರತಿಷ್ಠಾಪಿಸಲಾದ ಶ್ರೀ ದುರ್ಗಾ ಮಾತೆಯ ವಿಗ್ರಹದ ಪ್ರತಿಷ್ಠಾ ಕಾರ್ಯಗಳು ನೆರವೇರಿದವು. ಬಳಿಕ ಪ್ರತಿಷ್ಠಾಪಿಸಲಾದ ದೇವರ ವಿಗ್ರಹಗಳಿಗೆ ಬ್ರಹ್ಮಕಲಶಾಭಿಷೇಕ ನಡೆಸಲಾಯಿತು. ಈ ಅದ್ಭುತ ಕ್ಷಣಗಳನ್ನು ಕಣ್ತುಂಬಿಕೊಳ್ಳಲು ಕಾಯುತ್ತಿದ್ದ ಅಸಂಖ್ಯಾತ ಭಕ್ತರು ಈ ಪ್ರತಿಷ್ಠಾ ಕಾರ್ಯಕ್ಕೆ ಸಾಕ್ಷಿಗಳಾಗಿ ಪುನೀತರಾದರು.

ಪ್ರತಿಷ್ಠಾ ಕಾರ್ಯಕ್ರಮಕ್ಕೂ ಮೊದಲು ಮುಂಜಾವು 5.30 ಕ್ಕೆ 108 ತೆಂಗಿನ ಕಾಯಿಯ ಗಣಪತಿ ಹೋಮ ನಡೆಸಲಾಯಿತು. ದೇವರ ಪುನಃ ಪ್ರತಿಷ್ಠಾ ಅಷ್ಟಬಂಧ ಬ್ರಹ್ಮಕಲಶೋತ್ಸವದ ಬಳಿಕ ಪ್ರತಿಷ್ಠಾ ಬಲಿ, ಮಹಾ ಪೂಜೆ, ಮಹಾ ಮಂತ್ರಾಕ್ಷತೆ ಕಾರ್ಯಕ್ರಮ ನಡೆಯಿತು. ಬಳಿಕ ನಡೆದ ಅನ್ನ ಸಂತರ್ಪಣೆಯಲ್ಲಿ ಅಸಂಖ್ಯಾತ ಭಕ್ತ ಜನರು ಪಾಲ್ಗೊಂಡು ಶ್ರೀ ದೇವರ ಕೃಪೆಗೆ (4ನೇ ಪುಟಕ್ಕೆ)

ಬಿಜೆಪಿ ಅಭ್ಯರ್ಥಿ ಕ್ಯಾ.ಬ್ರಿಜೇಶ್ ಚೌಟರಿಂದ ಮತದಾನ

ಬಿಜೆಪಿ ಅಭ್ಯರ್ಥಿ ಬ್ರಿಜೇಶ್ ಚೌಟ ಡೊಂಗರಿಕೇರಿ ವಾರ್ಡಿನ ಬೂತ್ ಸಂಖ್ಯೆ 117 ರಲ್ಲಿ ತಂದೆ ಮತ್ತು ತಾಯಿಯೊಂದಿಗೆ ತೆರಳಿ ಮತ ಚಲಾಯಿಸಿದರು.

ಕಾಂಗ್ರೆಸ್ ಅಭ್ಯರ್ಥಿ ಪದ್ಮರಾಜ್ ಆರ್. ಪೂಜಾರಿ ಮತದಾನ

ಕಾಂಗ್ರೆಸ್ ಅಭ್ಯರ್ಥಿ ಪದ್ಮರಾಜ್ ಆರ್. ಪೂಜಾರಿ ಅವರು ಮಂಗಳೂರಿನ ಕಪಿತಾನಿಯೋ ಶಾಲೆಯ ಮತಗಟ್ಟೆಯಲ್ಲಿ ಮತ ಚಲಾಯಿಸಿದರು.

ಪತ್ನಿ ಸಾಯಿ ರಶ್ಮಿರಾಜ್ ಪೂಜಾರಿ ಹಾಗೂ ಪುತ್ರಿ ರಿತುರಾಜ್ ಹಾಗೂ ಹಿತೈಷಿಗಳೊಂದಿಗೆ ಆಗಮಿಸಿದ ಅವರು ಮತ ಚಲಾಯಿಸಿದರು.

ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಅಧ್ಯಕ್ಷರಾಗಿ ಮಹೇಶ್ ಪುಚ್ಚಪ್ಪಾಡಿ ಆಯ್ಕೆ ಎಂ.ಡಿ.ವಿಜಯಕುಮಾರ್ ಉಪಾಧ್ಯಕ್ಷ

ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ನೂತನ ಅಧ್ಯಕ್ಷರಾಗಿ ಗುತ್ತಿಗಾರು ಕಮಿಲದ ಮಹೇಶ್ ಪುಚ್ಚಪ್ಪಾಡಿ ಹಾಗೂ ಕಾರ್ಯದರ್ಶಿಯಾಗಿ ಕೋಡಪದವು ಕೆಲಿಂಜದ ವೆಂಕಟಗಿರೀಶ್ ಸಿ. ಜಿ. ಆಯ್ಕೆಯಾಗಿದ್ದಾರೆ. ಪುತ್ತೂರಿನಲ್ಲಿ ನಡೆದ ಅಖಿಲ ಭಾರತ ಅಡಿಕೆ ಬೆಳೆಗಾರರ ಸಂಘದ ಕಾರ್ಯಕಾರಿ ಸಮಿತಿ ಸಭೆಯಲ್ಲಿ ಈ ಆಯ್ಕೆ ನಡೆಯಿತು. ಉಪಾಧ್ಯಕ್ಷರಾಗಿ ಎಂ. ಡಿ. ವಿಜಯಕುಮಾರ್ (4ನೇ ಪುಟಕ್ಕೆ)

ಸುಳ್ಯ: ಚೆನ್ನಕೇಶವ ದೇವರಿಗೆ ನೂತನ ರಥ ನಿರ್ಮಾಣಕ್ಕೆ ಶಿಲ್ಪಿಗಳಿಗೆ ವೀಳ್ಯ

ಸುಳ್ಯ ಶ್ರೀ ಚನ್ನಕೇಶವ ದೇವರಿಗೆ ಜೀರ್ಣೋದ್ಧಾರ ಸಮಿತಿ ಅಧ್ಯಕ್ಷರಾದ ಡಾ.ಕೆ.ವಿ ಚಿದಾನಂದ ರವರು ಸಮರ್ಪಿಸುವ ನೂತನ ಬ್ರಹ್ಮ ರಥ ನಿರ್ಮಾಣಕ್ಕೆ ದೇವರ ಸನ್ನಿಧಿಯಲ್ಲಿ ಪ್ರಾರ್ಥಿಸಿ ರಥ ಶಿಲ್ಪಿ ಶ್ರೀ ಕೋಟೇಶ್ವರ ರಾಜಗೋಪಾಲ ಆಚಾರ್ಯರಿಗೆ ವೀಳ್ಯ ಪ್ರಧಾನ ಮಾಡಲಾಯಿತು. ಈ ಸಂದರ್ಭದಲ್ಲಿ ಅನುವಂಶಿಕ ಆಡಳಿತ ಮೊಕ್ತೇಸರರಾದ ಹರಪ್ರಸಾದ ತುದಿಯಡ್ಕ, ಡಾ .ಕೆ.ವಿ ಚಿದಾನಂದ ದಂಪತಿಗಳು, ಲಿಂಗಪ್ಪಗೌಡ ಕೇರ್ಪಳ. (4ನೇ ಪುಟಕ್ಕೆ)

42 ವರ್ಷಗಳ ಅನುಭವಿ ಜ್ಯುವೆಲ್ಲರಿ ಬಿಂದು ಸುಳ್ಯದಲ್ಲಿ ಶುಭಾರಂಭ, ಕೋಸ್ಟಲ್ ವುಡ್ ತಾರೆಯರು ಭಾಗಿ

ಸುಳ್ಯ: ಕಾಸರಗೋಡಿನಲ್ಲಿ ಕಳೆದ 42 ವರ್ಷಗಳಿಂದ ಮನೆ ಮಾತಾಗಿರುವ ಬಿಂದು ಜ್ಯುವೆಲ್ಲರಿಯ ಮೂರನೇ ಶಾಖೆ ಸುಳ್ಯದ ಪೊಲೀಸ್ ಠಾಣೆಯ ಮುಂಭಾಗದ ನೂತನ ಕಟ್ಟಡದಲ್ಲಿ ಶನಿವಾರ ಶುಭಾರಂಭಗೊಂಡಿತು

ಸುಳ್ಯ ಶಾಸಕಿ ಭಾಗೀರಥಿ ಮುರುಳ್ಯ ಅವರು ಬಿಂದು ಜ್ಯುವೆಲ್ಲರಿಯ ಸುಳ್ಯ ಶಾಖಾ ಮಳಿಗೆಯನ್ನು ಉದ್ಘಾಟಿಸಿದರು. ಕೊಸ್ಟಲ್ ವುಡ್ ಚಲನಚಿತ್ರ ನಟ ನಿರ್ದೇಶಕ ಅರ್ಜುನ್ ಕಾಪಿಕಾಡ್ ಹಾಗೂ ಚಲನಚಿತ್ರ ನಟಿ ವಿಕೀಷಾ ರಾವ್ ನೂತನ ಸಂಸ್ಥೆಗೆ ಶುಭಹಾರೈಸಿದರು. ಸಂಸ್ಥೆಯ ಆಡಳಿತ ನಿರ್ದೇಶಕ ಅಭಿಲಾಷ್ ಮಾತನಾಡಿ ಗ್ರಾಹಕರ ಸಹಕಾರ ಮತ್ತು ತಮ್ಮ ಸಂಸ್ಥೆಯ ಕುರಿತಾಗಿ ತಿಳಿಸಿದರು.

ಪ್ರಥಮ ಗ್ರಹಕರಾಗಿ ಸುಳ್ಯದ ಬಿಂದು ಜ್ಯುವೆಲ್ಲರಿ ಸಂಸ್ಥೆಯ ಕಟ್ಟಡದ ಮಾಲಕರಾದ ರಮೇಶ್ ಸೋಮಯಾಗಿರವರಿಗೆ ವಿನಯ ಕುಮಾರ್ ಕಂದಡ್ಕ ಹಸ್ತಾಂತರಿಸಿದರೆ ದ್ವಿತೀಯ ಗ್ರಾಹಕರಾದ ಯಶ್ವಿತ್ ಕಾಳಮನೆಯವರಿಗೆ ಸಂಸ್ಥೆಯ ಆಡಳಿತ ನಿರ್ದೇಶಕರಾದ ಅಭಿಲಾಷ್ ಮತ್ತು ಡಾ.ಅಜೀತೇಶ್ ನೀಡಿದರು. ಉದ್ಘಾಟನಾ ಸಮಾರಂಭದಲ್ಲಿ ಸುಳ್ಯ ವರ್ತಕರ ಸಂಘದ ಅಧ್ಯಕ್ಷ ಪಿ.ಬಿ.ಸುಧಾಕರ ರೈ, ಸುಳ್ಯ ಮದರ್ ಥೆರೆಸಾ ಚರ್ಚ್‌ನ ಫಾ.ಕ್ರಿಸ್ಟಿನ್, ಉದ್ಯಮಿ ಕೃಷ್ಣ ಕಾಮತ್, ಸುಳ್ಯ ಮುಹಿಯಾದೀನ್ ಜುಮ್ಮಾ ಮಸೀದಿ ಅಧ್ಯಕ್ಷ ಹಾಜಿ ಕೆ.ಎಂ.ಮುಸ್ತಫಾ, ಸುಳ್ಯ ನ.ಪಂ. ಮಾಜಿ ಅಧ್ಯಕ್ಷರಾದ ಎಂ.ವೆಂಕಪ್ಪ ಗೌಡ, ವಿನಯಕುಮಾರ್ ಕಂದಡ್ಕ, ಎನ್.ಎ.ರಾಮಚಂದ್ರ, ಲಯನ್ಸ್ ಜಿಲ್ಲಾ ಮಾಜಿ ಗವರ್ನರ್ ಎಂ.ಬಿ.ಸದಾಶಿವ, ಸುಳ್ಯ ಬಂಟರ ಸಂಘದ ಅಧ್ಯಕ್ಷ ಎನ್.ಜಯಪ್ರಕಾಶ್ ರೈ, ಉದ್ಯಮಿ ಆದಂ ಹಾಜಿ ಕಮ್ಮಾಡಿ, ನ.ಪಂ.ಸದಸ್ಯರಾದ ಕಿಶೋರಿ ಶೇಟ್, ರಾಜು ಪಂಡಿತ್, ನ.ಪಂ. ಮಾಜಿ ಸದಸ್ಯ ಗೋಕುಲ್ ದಾಸ್, ಸಂಕೀರ್ಣ ಮಾಲಕ ರಮೇಶ್ ಸೋಮಯಾಗಿ ಮತ್ತಿತರರು ಉಪಸ್ಥಿತರಿದ್ದರು. ಅವಿನಾಶ್ ಕಾಮತ್ ಸ್ವಾಗತಿಸಿ, ಕಾರ್ಯಕ್ರಮ ನಿರೂಪಿಸಿದರು.

ಚುನಾವಣೆ ಹಿನ್ನಲೆಯಲ್ಲಿ ಡೆಪಾಸಿಟ್ ಇರಿಸಿದ ಕೋವಿ ರೈತರಿಗೆ ಷರತ್ತಿನೊಂದಿಗೆ ನೀಡಲು ಆದೇಶ

ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಜಿಲ್ಲಾಧಿಕಾರಿಗಳು ಕೃಷಿಕರ ಉಪಯೋಗಕ್ಕೆ ನೀಡಿದ್ದ ಮತ್ತು ಆತ್ಮ ರಕ್ಷಣೆಗೆ ನೀಡಲಾದ ಗನ್ ಗಳನ್ನು ಡೆಪಾಸಿಟ್ ಇಡಲು ಆದೇಶಿಸಿದ್ದರು ಅಲ್ಲದೇ ಕೆಲವು ಕಡೆಗಳಲ್ಲಿ ಕಾಡು ಪ್ರಾಣಿಗಳ ಹಾವಳಿಯನ್ನು ಮನಗಂಡು ಜಿಲ್ಲಾಧಿಕಾರಿಗಳು ಠೇವಣಿ ಇರಿಸಲಾದ ಕೋವಿ ಮತ್ತು ಗನ್ ಗಳನ್ನು ಮರಳಿ ರೈತರಿಗೆ ನೀಡಲು ಷರತ್ತಿನೊಂದಿಗೆ ಆದೇಶಿಸಿದ್ದಾರೆ

ಆದೇಶದಲ್ಲಿ ಏನಿದೆ ಷರತ್ತುಗಳು ಏನು ಗೊತ್ತಾ.: ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಕೃಷಿರಕ್ಷಣೆಗಾಗಿ ಆಯುಧ ಪರವಾನಿಗೆಗಳನ್ನು ಹೊಂದಿರುವ (ಪೊಲೀಸ್ ಆಯುಕ್ತರ ಕಾರ್ಯ ವ್ಯಾಪ್ತಿಯನ್ನು ಹೊರತುಪಡಿಸಿ) ಎಲ್ಲಾ ಆಯುಧ ಪರವಾನಿಗೆದಾರರು ತಮ್ಮ ಆಯುಧಗಳನ್ನು ಈಗಾಗಲೇ ಪೊಲೀಸ್ ಠಾಣೆ ಅಥವಾ ಅಧೀಕೃತ ಕೋವಿ ಹಾಗೂ ಮದ್ದುಗುಂಡು ವ್ಯಾಪಾರಸ್ಥರಲ್ಲಿ ಠೇವಣಿ ಇರಿಸಿದ್ದು. ಸದ್ರಿ ಅಯುಧಗಳನ್ನು ಹಿಂಪಡೆಯಲು ಆಯುಧ ಪರವಾನಿಗೆದಾರರಿಗೆ ಅನುಮತಿಯನ್ನು ನೀಡಲಾಗಿದ್ದು, ಜಿಲ್ಲೆಯ ಎಲ್ಲಾ ಪೊಲೀಸ್ ಠಾಣೆ / ಅಧೀಕೃತ ಕೋವಿ ಹಾಗೂ ಮದ್ದುಗುಂಡು ವ್ಯಾಪಾರಸ್ಥರು ಈ ಕೂಡಲೇ ಕೃಷಿರಕ್ಷಣೆಗಾಗಿ ಅಯುಧಗಳನ್ನು ಹೊಂದಿರುವ ಪರವಾನಿಗೆದಾರರ ಆಯುಧಗಳನ್ನು (ನಮೂನೆ – ಖಗಿ) ಹಿಂದಿರುಗಿಸಲು ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಿದೆ. ನೀತಿ ಸಂಹಿತೆ ಜಾರಿಯಲ್ಲಿರುವ ಸಮಯದಲ್ಲಿ ಆಯುಧ ಪರವಾನಿಗೆ ಈ ಕೆಳಕಂಡ ಷರತ್ತುಗಳನ್ನು ತಪ್ಪದೇ ಪಾಲಿಸತಕ್ಕದ್ದು ಎಂದು ಆದೇಶದಲ್ಲಿ ತಿಳಿಸಿದ್ದು ಈ ಕೆಳಗಿನ ಷರತ್ತುಗಳನ್ನು ವಿಧಿಸಲಾಗಿದೆ

1. ಯಾವುದೇ ಮೆರವಣಿಗೆ, ಜಾತ್ರೆ ಇತ್ಯಾದಿಗಳಲ್ಲಿ ಶಸ್ತ್ರಾಸ್ತ್ರವನ್ನು ಒಯ್ಯಲು ಅವಕಾಶವಿರುವುದಿಲ್ಲ., 2. ಬೆಳೆಗಳ ರಕ್ಷಣೆಗಾಗಿ ಸದ್ರಿ ಅಯುಧಗಳನ್ನು ಮಾತ್ರ ಬಳಸತಕ್ಕದ್ದಾಗಿದೆ., 3. ಪರವಾನಿಗೆಯಲ್ಲಿ ಹೊಂದಿರುವ ಶಸ್ತ್ರಾಸ್ತ್ರವನ್ನು ಬಹಿರಂಗವಾಗಿ ಎಲ್ಲೂ ಪ್ರದರ್ಶಿಸುವಂತಿಲ್ಲ., 4. ಸಾರ್ವಜನಿಕರನ್ನು ಪ್ರತ್ಯಕ್ಷವಾಗಿ ಅಥವಾ ಪರೋಕ್ಷವಾಗಿ ಬೆದರಿಸಲು ಶಸ್ತ್ರಾಸ್ತ್ರವನ್ನು ಬಳಸಬಾರದು., 5. ಯಾವುದೇ ಸಂದರ್ಭದಲ್ಲಿ ಅವಶ್ಯವೆನಿಸಿದಲ್ಲಿ ಪೊಲೀಸ್ ಅಧಿಕಾರಿಗಳು/ ಸರಕಾರಿ ಅಧಿಕಾರಿಗಳಿಗೆ ತಪಾಸಣೆ ವೇಳೆ ಹಾಜರುಪಡಿಸತಕ್ಕದ್ದು ಮತ್ತು ತಪಾಸಣೆಗೆ ಸಹಕರಿಸಿ ಪೂರಕ ದಾಖಲೆಗಳನ್ನು ಒದಗಿಸತಕ್ಕದ್ದು., 6. ಪರವಾನಿಗೆದಾರರು ಮೇಲಿನ ಶರ್ತಗಳನ್ನು ಉಲ್ಲಂಘನೆ ಮಾಡಿ ಕಾನೂನುಬಾಹಿರ ಕೃತ್ಯಗಳಲ್ಲಿ ತೊಡಗಿರುವುದು ಕಂಡುಬಂದಲ್ಲಿ, ಪರವಾನಿಗೆಯಲ್ಲಿ (4ನೇ ಪುಟಕ್ಕೆ)

ಎಸ್ಸೆಸ್ಸೆಫ್ ಕಲ್ಲುಗುಂಡಿ ಶಾಖೆಯ ಪದಾಧಿಕಾರಿಗಳ ಆಯ್ಕೆ

ಎಸ್ಸೆಸ್ಸೆಫ್ ಕಲ್ಲುಗುಂಡಿ ಶಾಖೆಯ ನೂತನ ಅಧ್ಯಕ್ಷರಾಗಿ ಆಶಿಕ್ ಕೆ ಹೆಚ್, ಪ್ರಧಾನ ಕಾರ್ಯದರ್ಶಿಯಾಗಿ ರುನೈಝ್ ಹಾಗೂ ಕೋಶಾಧಿಕಾರಿಯಾಗಿ ಮುಹಮ್ಮದ್ ಆಲಿ ಆಯ್ಕೆ

ಎಸ್ಸೆಸ್ಸೆಫ್ ಕಲ್ಲುಗುಂಡಿ ಶಾಖೆಯ ವಾರ್ಷಿಕ ಮಹಾಸಭೆಯು ಮುಹಮ್ಮದ್ ಅಲಿ ಚಟ್ಟೆಕ್ಕಲ್ಲು ರವರ ಅಧ್ಯಕ್ಷತೆಯಲ್ಲಿ ಜರುಗಿತು. ಎಸ್ಸೆಸ್ಸೆಫ್ ಸುಳ್ಯ ಡಿವಿಷನ್ ಕಾರ್ಯದರ್ಶಿ ಸ್ವಾದಿಕ್ ರವರು ಉದ್ಘಾಟಿಸಿದರು. ರುನೈಝ್ ಕೊಯನಾಡುರವರು ವರದಿ ವಾಚಿಸಿ, ಲೆಕ್ಕಪತ್ರ ಮಂಡಿಸಿದರು.

ನೂತನ ಸಮಿತಿ ಅಧ್ಯಕ್ಷರಾಗಿ ಆಶಿಕ್ ಕೆ ಹೆಚ್, ಪ್ರಧಾನ ಕಾರ್ಯದರ್ಶಿಯಾಗಿ ರುನೈಝ್ ಕೊಯನಾಡು, ಕೋಶಾಧಿಕಾರಿಯಾಗಿ ಮುಹಮ್ಮದ್ ಅಲಿ, ಕಾರ್ಯದರ್ಶಿಗಳಾಗಿ ನೌಶಾದ್ ಹಿಮಮಿ(ದಅವಾ), ಶಾಕಿರ್ ಕಲ್ಲುಗುಂಡ

ಮಾಜಿ ಸಚಿವ ಎಸ್. ಅಂಗಾರ ಕುಟುಂಬ ಸಮೇತರಾಗಿ ಆಗಮಿಸಿ ಮತಚಲಾವಣೆ

ಮಾಜಿ ಶಾಸಕ ಹಾಗೂ ಮಾಜಿ ಸಚಿವರಾದ ಎಸ್.ಅಂಗಾರ ಅವರು ಬೂತ್ ಸಂಖ್ಯೆ 157 ದೊಡ್ಡತೋಟ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಮತದಾನ ಮಾಡಿದರು. ಅಂಗಾರ ಅವರು ಪತ್ನಿ ಶ್ರೀಮತಿ ವೇದಾವತಿ ,ಪುತ್ರಿ ಪೂಜಾ ಹಾಗೂ ಕುಟುಂಬದ ಸದಸ್ಯರ ಜೊತೆ ಆಗಮಿಸಿ ಮತದಾನ ಮಾಡಿದರು.

ಕಾಂಗ್ರೆಸ್ ಬೂತ್‌ಗಳಿಗೆ ಭೇಟಿ ನೀಡಿದ ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿ

ಲೋಕಸಭಾ ಚುನಾವಣೆ ಹಿನ್ನಲೆಯಲ್ಲಿ ಮತದಾನದ ದಿನದಂದು ಕಾಂಗ್ರೆಸ್ ಬೂತ್‌ಗಳಿಗೆ ಅರೆಭಾಷೆ ಅಕಾಡೆಮಿ ಅಧ್ಯಕ್ಷ ಸದಾನಂದ ಮಾವಜಿಯವರು ಭೇಟಿ ನೀಡಿ ಕಾರ್ಯಕರ್ತರ ಜೋತೆಗೆ ಸಮಾಲೋಚನೆ ನಡೆಸಿದರು. ಈ ಸಂದರ್ಭದಲ್ಲಿ ಸ್ಥಳೀಯ ನಾಯಕರು ಮತ್ತು ಕಾರ್ಯಕರ್ತರು ಉಪಸ್ಥಿತರಿದ್ದರು.

ಬ್ರಹ್ಮಕಲಶೋತ್ಸವದ ಸಂಭ್ರಮದಲ್ಲಿ ಮಂಡೆಕೋಲು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನ – ಕಣ್ಮನ ತಣಿಸಿದ ಸಾಂಸ್ಕೃತಿಕ ಕಾರ್ಯಕ್ರಮ

ಬೃಹತ್ ವೇದಿಕೆ, ಕಣ್ಣುಕುಕ್ಕುವ ಬಣ್ಣಬಣ್ಣದ ಲೈಟಿಂಗ್ಸ್‌ಗಳು, ಕಿವಿಗಿಂಪಾದ ಸಂಗೀತದ ಅಲೆ, ವೇದಿಕೆಗೆ ಮೆರುಗನ್ನೀಯುವ ಕಾಷ್ಠ ಕಲೆಗಳ ಶೃಂಗಾರ, ಭಾರತೀಯ ಸಂಸ್ಕೃತಿಗಳಿಗೆ ಕನ್ನಡಿ ಹಿಡಿಯುವಂತಹ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮ. ಇದು ಕಂಡುಬಂದದ್ದು ನಗರದಂಚಿನಲ್ಲಿರುವ ಯಾವುದೋ ಬೃಹತ್ ಸಂಸ್ಥೆ ಆಯೋಜಿಸಿದ ಕಾರ್ಯಕ್ರಮಗಳ ವೇದಿಕೆಯ ವರ್ಣನೆಯಲ್ಲ. ಇದು ಮಂಡೆಕೋಲು ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಪ್ರಯುಕ್ತ ಆಯೋಜಿಸಲಾದ ಧಾರ್ಮಿಕ ಸಭಾ ಕಾರ್ಯಕ್ರಮ ಹಾಗೂ ಸಾಂಸ್ಕೃತಿ–

ಕ ಕಾರ್ಯಕ್ರಮಗಳಲ್ಲಿ ಕಂಡು ಬಂದ ದೃಶ್ಯ. ವೇದಿಕೆಯನ್ನು ರಾಜ್ಯ ಮಟ್ಟದ ಸಾಹಿತ್ಯ ಸಮ್ಮೇಳನದ ವೇದಿಕೆ ಅಥವಾ ಮೂಡುಬಿದಿರೆಯ ಆಳ್ವಾಸ್ ಶಿಕ್ಷಣ ಸಂಸ್ಥೆ ಆಯೋಜಿಸುವ ಆಳ್ವಾಸ್ ನುಡಿಸಿರಿ, ವಿರಾಸತ್ ಕಾರ್ಯಕ್ರಮಗಳ ವೇದಿಕೆಗೆ ಹೋಲಿಸಿದರೂ ಅತಿಶಯೋಕ್ತಿಯಾಗಲಾರದು.

ಬ್ರಹ್ಮಕಲಶೋತ್ಸವದ ಪ್ರಯುಕ್ತ ಎಪ್ರಿಲ್ 27 ರಿಂದ ಆರಂಭಗೊಂಡ ಎಲ್ಲಾ ಕಾರ್ಯಕ್ರಮಗಳ ಗುಣಮಟ್ಟವೂ ಅಷ್ಟೇ ಉತ್ತಮವಾಗಿತ್ತು. ಮೊದಲ ದಿನ ಊರಿನ ಮಕ್ಕಳಿಂದ ನಡೆದ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ವೀಕ್ಷಿಸಲು ಸಭಿಕರು ಕಿಕ್ಕಿರಿದು ತುಂಬಿದ್ದರು. ಬಳಿಕ ತುಳುನಾಡ ಗಾನ ಗಂಧರ್ವ, ಆರ್ಯಭಟ ಪ್ರಶಸ್ತಿ ಪುರಸ್ಕೃತ ಪುತ್ತೂರು ಜಗದೀಶ್ ಆಚಾರ್ಯ ಮತ್ತು ಬಳಗದವರಿಂದ ನಟ್ಟ ನಡು ರಾತ್ರಿಯವರೆಗೂ ನಡೆದ ಸಂಗೀತ ಗಾನ ಸಂಭ್ರಮಕ್ಕೂ ಎಲ್ಲೂ ಪ್ರೇಕ್ಷಕರ ಕೊರತೆ ಕಂಡು ಬರಲಿಲ್ಲ.

ಎಪ್ರಿಲ್ 28 ರ ಭಾನವಾರದ ಕಾರ್ಯಕ್ರಮಗಳೂ ಒಂದಕ್ಕಿಂತ ಒಂದು ಮಿಗಿಲಾಗಿದ್ದವು. ಸಭಾ ಕಾರ್ಯಕ್ರಮದ ಬಳಿಕ ನಾಟ್ಯ ನಿಲಯಂ ಗುರು ಶ್ರೀ ಬಾಲಕೃಷ್ಣ ಮಂಜೇಶ್ವರ ಅವರ ಶಿಷ್ಯೆ ನೃತ್ಯ ವಿದುಷಿ ಕು. ಅಪೂರ್ವ ಮತ್ತು ಬಳಗದವರಿಂದ ನಡೆದ ನೃತ್ಯ ವೈವಿಧ್ಯ ಕಾರ್ಯಕ್ರಮ ಅಂತಾರಾಷ್ಟ್ರೀಯ ಮಟ್ಟದ ಕಾರ್ಯಕ್ರಮಕ್ಕೆ ಸರಿಸಾಟಿಯಾಗುವಂತಿತ್ತು. ಧ್ವನಿಸುರುಳಿಯ ಮೊರೆ ಹೋಗದೆ ನು–ರಿತ ಕಲಾವಿದರಿಂದಲೇ ವೇದಿಕೆಯಲ್ಲೇ ಹಾಡು, ಸಂಗೀತಗಳ ಅಳವಡಿಕೆ ಮಾಡಿರುವುದು ಈ ಕಾರ್ಯಕ್ರಮದ ಹೈಲೈಟ್ ಆಗಿತ್ತು.

ಸುದೀಪ್ ರಾಜ್ – ದಿವ್ಯಶ್ರೀ

ನೆಲ್ಲೂರು ಕೆಮ್ರಾಜೆ ಗ್ರಾಮದ ಕೋಟೆಮಲೆ ಎರ್ಮೆಟ್ಟಿ ಸುರೇಶ ಪ್ರಭುರವರ ಪುತ್ರ ಸುದೀಪ್ ರಾಜ್ ಇವರ ವಿವಾಹವು ನೆಲ್ಲೂರು ಕೆಮ್ರಾಜೆ ಗ್ರಾಮದ ಕೋಟೆಮಲೆ ಹರಿಶ್ಚಂದ್ರ ನಾಯಕ್‌ರವರ ಪುತ್ರಿ ದಿವ್ಯಶ್ರೀ ಯೊಂದಿಗೆ ರೆಂಜಾಳ ಶ್ರೀ ಶಾಸ್ತಾವು ಸದಾಶಿವ ಮಹಾಗಣಪತಿ ದೇವಸ್ಥಾನದ ಶ್ರೀ ವಿನಾಯಕ ಸಭಾಭವನದಲ್ಲಿ ಎ.28ರಂದು ನಡೆಯಿತು.

ರಾಜ್ಯಕ್ಕೆ 4ನೇ ಸ್ಥಾನ ಪಡೆದ ದಿಶಾ ಉಪರ್ಣಗೆ ಅಭಿನಂದನೆ ಸಲ್ಲಿಸಿದ ಶಾಸಕಿ ಭಾಗೀರಥಿ ಮುರುಳ್ಯ

ಸುಬ್ರಹ್ಮಣ್ಯ: ದ್ವಿತೀಯ ಪಿಯುಸಿ ವಾರ್ಷಿಕ ಪರೀಕ್ಷೆಯ ವಾಣಿಜ್ಯ ವಿಭಾಗದಲ್ಲಿ 600ಕ್ಕೆ 594 ಅಂಕ ಪಡೆದ ಕುಮಾರಸ್ವಾಮಿ ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿನಿ ಸುಬ್ರಹ್ಮಣ್ಯದ ದೇವರಗದ್ದೆಯ ದಿಶಾ ಉಪರ್ಣ ಅವರ ಮನೆಗೆ ಮಂಗಳವಾರ ಶಾಸಕಿ ಭಾಗೀರಥಿ ಮುರುಳ್ಯ ಭೇಟಿ ನೀಡಿದರು.ಶೈಕ್ಷಣಿಕ ಸಾಧಕಿಯನ್ನು ಶಾಲು ಹೊದಿಸಿ, ಹಾರ ಹಾಕಿ ಫಲಪುಷ್ಪ ಸ್ಮರಣಿಕೆ ನೀಡಿ ಸನ್ಮಾನಿಸಿ ಗೌರವಿಸಿದರು. ಅಲ್ಲದೆ ವಿದ್ಯಾರ್ಥಿನಿಯ ಸಾಧನೆಯನ್ನು ಕೊಂಡಾಡಿದ ಶಾಸಕರು, ಇದು ಸುಬ್ರಹ್ಮಣ್ಯ ಸೇರಿದಂತೆ ತಾಲೂಕಿಗೆ ಹೆಮ್ಮೆಯ ಸಂಗತಿ.ಇನ್ನಷ್ಟು ಸಾಧನೆ ಮಾಡಿ ಭವಿಷ್ಯದಲ್ಲಿ ಶ್ರೇಷ್ಠತೆ ಸಂಪಾದಿಸಬೇಕು ಎಂದು ಸ್ಫೂರ್ತಿ ತುಂಬಿದರು.

ಸಾಧಕಿಗೆ ಗೌರವ:

ದೇವರಗದ್ದೆಯ ದಿಶಾಳ ನಿವಾಸಕ್ಕೆ ಆಗಮಿಸಿದ ಶಾಸಕರನ್ನು ಆರಂಭದಲ್ಲಿ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಸಿಬ್ಬಂದಿ ಹಾಗೂ ದಿಶಾಳ ತಂದೆ ಷಣ್ಮುಖ ಉಪರ್ಣ ಹಾಗೂ ತಾಯಿ ರೂಪಾ.ಎಸ್.ಉಪರ್ಣ ಆತ್ಮೀಯವಾಗಿ ಸ್ವಾಗತಿಸಿದರು.ಬಳಿಕ ಶಾಸಕಿ ಭಾಗೀರಥಿ ಮುರುಳ್ಯ ಸಾಧಕಿಯನ್ನು ಸನ್ಮಾನಿಸಿದರು.

ಈ ಸಂದರ್ಭ ಮಾಜಿ ಜಿ.ಪಂ.ಅಧ್ಯಕ್ಷ ವೆಂಕಟ್ ದಂಬೆಕೋಡಿ, ಸುಳ್ಯ ಬಿಜೆಪಿ ಮಂಡಲದ ಮಾಜಿ ಅಧ್ಯಕ್ಷ ಹರೀಶ್ ಕಂಜಿಪಿಲಿ, ದಿಶಾಳ ತಂದೆ ಷಣ್ಮುಖ ಉಪರ್ಣ, ತಾಯಿ ರೂಪಾ.ಎಸ್.ಉಪರ್ಣ, ಸುಬ್ರಹ್ಮಣ್ಯ ಗ್ರಾಪಂ. ಅಧ್ಯಕ್ಷೆ ಸುಜಾತಾ ಕಲ್ಲಾಜೆ, ಉಪಾಧ್ಯಕ್ಷ ವೆಂಕಟೇಶ್ ಎಚ್.ಎಲ್, ಸದಸ್ಯೆ ಭಾರತಿ ದಿನೇಶ್, ಸುಬ್ರಹ್ಮಣ್ಯ ಬಿಜೆಪಿ ಗ್ರಾಮ ಸಮಿತಿ ಅಧ್ಯಕ್ಷ ದಿನೇಶ್ ಸಂಪ್ಯಾಡಿ, ಕುಕ್ಕೆ ದೇವಳದ ವ್ಯವಸ್ಥಾಪನಾ ಸಮಿತಿ ಮಾಜಿ ಸದಸ್ಯರಾದ ವನಜಾ.ವಿ.ಭಟ್, ಶೋಭಾ ಗಿರಿಧರ್, ಪ್ರಮುಖರಾದ ಚಿದಾನಂದ ಕಂದಡ್ಕ, ಪ್ರಸಾದ್ ಕಾಟೂರ್, ಶೇಖರ್ ಸುಬ್ರಹ್ಮಣ್ಯ, ರಾಮಚಂದ್ರ ದೇವರಗದ್ದೆ ಉಪಸ್ಥಿತರಿದ್ದರು.

ಐನೆಕಿದು: ಪೂರ್ಣಗೊಂಡ ಮತದಾನ – 90% ಮತದಾನ

ಏ.26ರಂದು ಲೋಕಸಭಾ ಚುನಾವಣೆ ನಡೆದಿದ್ದು, ಬೆಳಿಗ್ಗೆ 7:00 ಗಂಟೆಯಿಂದ ಸಂಜೆ 6:00 ಗಂಟೆಯವರೆಗೆ ಎಲ್ಲೆಡೆ ಮತದಾನ ನಡೆಯಿತು.

ಐನೆಕಿದು ಗ್ರಾಮದ 117ನೇ ಬೂತ್ ನಲ್ಲಿ 734(90.62%) ಮತದಾರರು ಮತದಾನ ಮಾಡಿದ್ದಾರೆ.

ಬಾಳುಗೋಡು: ಪೂರ್ಣಗೊಂಡ ಮತದಾನ – 90% ಮತದಾನ

ಏ.26 ರಂದು ಲೋಕಸಭಾ ಚುನಾವಣೆ ನಡೆದಿದ್ದು, ಬೆಳಿಗ್ಗೆ 7:00 ಗಂಟೆಯಿಂದ ಸಂಜೆ 6:00 ಗಂಟೆಯವರೆಗೆ ಎಲ್ಲೆಡೆ ಮತದಾನ ನಡೆಯಿತು.

ಬಾಳುಗೋಡು ಗ್ರಾಮದ 233ನೇ ಬೂತ್‌ನಲ್ಲಿ 522 ಪುರುಷ ಮತದಾರರು ಹಾಗೂ 516 ಮಹಿಳಾ ಮತದಾರರು ಮತದಾನ ಮಾಡಿದ್ದು, ಒಟ್ಟು 1038(90.89%) ಮತದಾರರು ಮತದಾನ ಮಾಡಿದ್ದಾರೆ.

ಹರಿಹರ ಪಲ್ಲತ್ತಡ್ಕ: ಪೂರ್ಣಗೊಂಡ ಮತದಾನ – 88% ಮತದಾನ

ಲೋಕಸಭಾ ಚುನಾವಣೆ ನಡೆದಿದ್ದು, ಬೆಳಿಗ್ಗೆ 7:00 ಗಂಟೆಯಿಂದ ಸಂಜೆ 6:00 ಗಂಟೆಯವರೆಗೆ ಎಲ್ಲೆಡೆ ಮತದಾನ ನಡೆಯಿತು.

ಹರಿಹರ ಪಲ್ಲತ್ತಡ್ಕದ ಪ್ರಾಥಮಿಕ ಶಾಲಾ ಮತಗಟ್ಟೆ ಸಂಖ್ಯೆ 118 ರಲ್ಲಿ 371 ಪುರುಷ ಮತದಾರರು ಹಾಗೂ 355 ಮಹಿಳಾ ಮತದಾರರು ಮತದಾನ ಮಾಡಿದ್ದು, ಒಟ್ಟು 726(88.32%) ಮತದಾರರು ಮತದಾನ ಮಾಡಿದ್ದಾರೆ.

ಮಾವಿನಕಟ್ಟೆ : ನವ ವಧುವಿನಿಂದ ಮತ ಚಲಾವಣೆ

ಮಾವಿನಕಟ್ಟೆ 159 ನೇ ಬೂತ್ ನಲ್ಲಿ ನವ ವಧು ಪತಿಯೊಂದಿಗೆ ಆಗಮಿಸಿ ಮತದಾನ ಮಾಡಿದರು. ದೇವಚಳ್ಳ ಗ್ರಾಮದ ಅಚ್ರಪ್ಪಾಡಿ ಕೃಷ್ಣಪ್ಪ ಗೌಡರ ಪುತ್ರಿ ರಶ್ಮಿಯ ವಿವಾಹ ಏ.26ರಂದು ವಳಲಂಬೆ ದೇವಸ್ಥಾನದಲ್ಲಿ ನಡೆದಿದ್ದು ನವ ವಧು ತನ್ನ ಪತಿ ಚೇತನ್ ಕುಮಾರ್ ಜತೆ ಮತದಾನ ಕೇಂದ್ರಕ್ಕೆ ಆಗಮಿಸಿ ತನ್ನ ಹಕ್ಕು ಚಲಾಯಿಸಿದರು. ಈ ಸಂದರ್ಭದಲ್ಲಿ ಬಿಜೆಪಿ ಯುವ ಮೋರ್ಚಾ ಅಧ್ಯಕ್ಷ ಶ್ರೀಕಾಂತ್ ಮಾವಿನಕಟ್ಟೆ ಮತ್ತು ಬಿಜೆಪಿ ಕಾರ್ಯಕರ್ತರು ಉಪಸ್ಥಿತರಿದ್ದರು.

ಬಾಳುಗೋಡು : ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಪಿ.ಸಿ.ಜಯರಾಮ್ ರಿಂದ ಕಾರ್ಯಕರ್ತರ ಭೇಟಿ

ಬಾಳುಗೋಡು ಮತಗಟ್ಟೆ ಬಳಿ ಕಾಂಗ್ರೆಸ್ ಕಾರ್ಯಕರ್ತರು ತಮ್ಮ ಅಭ್ಯರ್ಥಿ ಪರ ಮತಯಾಚನೆ ಮಾಡಿದರು. ಶೈಲೇಶ್ ಕಟ್ಟೆಮನೆ, ಪಿ.ಸಿ ಜಯರಾಮ, ಚೇತನ್ ಕಜೆಗದ್ದೆ, ರಾಧಾಕೃಷ್ಣ ಕಟ್ಟೆಮನೆ ಮತ್ತಿತರರು ಉಪಸ್ಥಿತರಿದ್ದರು.

ದುಗ್ಗಲಡ್ಕ ಮತ್ತು ಕೊಯಿಕುಳಿ ಬೂತ್‌ಗೆ ಎನ್ ಜಯಪ್ರಕಾಶ್ ರೈ ಭೇಟಿ

ಸುಳ್ಯ ನಗರದ ದುಗ್ಗಲಡ್ಕ ಮತ್ತು ಕೊಯಿಕುಳಿ ಬೂತ್ ಗೆ ಸುಳ್ಯ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಚುನಾವಣಾ ವೀಕ್ಷಕ, ಜಿಲ್ಲಾ ಕಾಂಗ್ರೆಸ್ ಉಪಾಧ್ಯಕ್ಷ ಎನ್ ಜಯಪ್ರಕಾಶ್ ರೈ ಭೇಟಿ ನೀಡಿ ಕಾರ್ಯಕರ್ತರಿಗೆ ಧೈರ್ಯ ತುಂಬಿದರು.

ಅಜ್ಜಾವರ : ಕಾರ್ಯಕರ್ತರ ಜತೆ ಬಿಜೆಪಿ ಮಂಡಲ ಸಮಿತಿ ಅಧ್ಯಕ್ಷ ವೆಂಕಟ್ ವಳಲಂಬೆ

ಅಜ್ಜಾವರದಲ್ಲಿ ಬಿಜೆಪಿ ಕಾರ್ಯಕರ್ತರನ್ನು ಮಂಡಲ ಸಮಿತಿ ಅಧ್ಯಕ್ಷ ವೆಂಕಟ್ ವಳಲಂಬೆ ಭೇಟಿ ಮಾಡಿದರು. ಈ ಸಂದರ್ಭದಲ್ಲಿ ರವಿರಾಜ್ ಕರ್ಲಪ್ಪಾಡಿ, ಯತೀಶ್ ಪಡ್ಡಂಬೈಲು, ಮನ್ಮಥ ಅಡ್ಪಂಗಾಯ, ರಮೇಶ್ ಮೇದಿನಡ್ಕ ಹಾಗೂ ಕಾರ್ಯಕರ್ತರು ಉಪಸ್ಥಿತರಿದ್ದರು.

ನಡುಗಲ್ಲು : ಮತಗಟ್ಟೆ ಬಳಿ ಬಿಜೆಪಿ ಕಾರ್ಯಕರ್ತರು

ನಡುಗಲ್ಲು ಮತಗಟ್ಟೆ ಬಳಿ ಸುಮಾರು ನೂರಕ್ಕೂ ಅಧಿಕ ಬಿಜೆಪಿ ಕಾರ್ಯಕರ್ತರು ತಮ್ಮ ಅಭ್ಯರ್ಥಿ ಕ್ಯಾಪ್ಟನ್ ಬ್ರಿಜೇಶ್ ಚೌಟ ಪರ ಮತಯಾಚನೆ ಮಾಡಿದರು.

ಮಂಡೆಕೋಲು ದೇವಸ್ಥಾನ ಬ್ರಹ್ಮಕಲಶ : ಧಾರ್ಮಿಕ ಸಭೆ

ಮಧ್ಯ ವಯಸ್ಸಿನ ಮಕ್ಕಳು ದೇವಸ್ಥಾನಕ್ಕೆ ಬರುವುದು ಕಡಿಮೆಯಾಗುತ್ತಿದೆ. ಆ ಮಕ್ಕಳನ್ನು ಒತ್ತಾಯ ಪೂರ್ವಕವಾಗಿಯಾದರೂ ದೇವಸ್ಥಾನಕ್ಕೆ ಕರೆದುಕೊಂಡು ಬರಬೇಕು: ಎಡನೀರು ಶ್ರೀ

ಮಕ್ಕಳ ಮುಗ್ಧತೆಯಲ್ಲಿಯೇ ಅವರಿಗೆ ಧರ್ಮ ಸಂಸ್ಕೃತಿಗಳನ್ನು ಕಲಿಸಿದಾಗ ಅದು ಮುಂದೆ ವರವಾಗಿ ಕಾಣಲು ಸಾಧ್ಯವಾಗಿದೆ – ಎಸ್ ಅಂಗಾರ.

ಸಂಸ್ಕಾರ ಕಲಿಸುವ, ಜಾತಿ–ಪಕ್ಷ ಬೇದ ಮರೆತು ಎಲ್ಲರನ್ನೂ ಒಂದಾಗಿಸುವ ಶ್ರದ್ಧಾ ಕೇಂದ್ರ ದೇವಸ್ಥಾನ. ದೇವಸ್ಥಾನದ ಎಲ್ಲ ಕಾರ್ಯದಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿಸಿಕೊಂಡಾಗ ಸಂಸ್ಕಾರ ಸಿಗುತ್ತದೆ" ಎಂದು ಎಡನೀರು ಶಂಕರಾಚಾರ್ಯ ಪೀಠದ ಸಚ್ಚಿದಾನಂದ ಭಾರತೀ ಮಹಾಸ್ವಾಮಿಗಳು ಹೇಳಿದರು.

ಮಂಡೆಕೋಲು ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನದ ಎ.30ರಂದು ನಡೆದ ಸಭಾ ಕಾರ್ಯಕ್ರಮವನ್ನು ದೀಪ ಬೆಳಗಿಸಿ, ಆಶೀರ್ವಚನ ನೀಡಿದರು.

"ಮಧ್ಯ ವಯಸ್ಸಿನ ಮಕ್ಕಳು ದೇವಸ್ಥಾನಕ್ಕೆ ಬರುವುದು ಕಡಿಯಾಗುತ್ತಿದೆ. ಆ ಮಕ್ಕಳನ್ನು ಒತ್ತಾಯ ಪೂರ್ವಕವಾಗಿಯಾದರೂ ದೇವಸ್ಥಾನಕ್ಕೆ ಕರೆದುಕೊಂಡು ಬರಬೇಕು. ಆಗ ನಮ್ಮ ಸಂಸ್ಕಾರ, ಪರಂಪರೆಯನ್ನು ಮುಂದಿನ ಪೀಳಿಗೆಗೆ ಹಂಚಲು ಸಾಧ್ಯವಾಗುತ್ತದೆ" ಎಂದು ಹೇಳಿದರು. ಧಾರ್ಮಿಕ ಉಪನ್ಯಾಸ ನೀಡಿದ ಕುಂಟಾರು ರವೀಶ ತಂತ್ರಿಯವರು, ದೇವರು ಬಿಂಬವಾದರೆ ನಾವು ಪ್ರತಿಬಿಂಬವಿದ್ದಂತೆ. ಊರಿನ ಶ್ರದ್ಧಾಕೇಂದ್ರದಲ್ಲಿ ಆಗಬೇಕಾದ ಕಾರ್ಯ ಚೆನ್ನಾಗಿ ನಡೆದರೆ ಊರಿಗೇ ಶ್ರೆಯಸ್ಸು ಆಗುತ್ತದೆ" ಎಂದು ಹೇಳಿದರು.

ಸಚಿವ ಎಸ್.ಅಂಗಾರ ಮಾತನಾಡಿ, ದೇವರು ಜಾತಿ –ಧರ್ಮವನ್ನು ನೋಡದೇ ಭಕ್ತಿ ಒಲಿಯುತ್ತಾನೆ" ಮಕ್ಕಳು ಮುಗ್ಧತೆಯಲ್ಲಿಯೇ ದೇವತಾ ಕರ್ಯಗಳಲ್ಲಿ ಜೋಡಿಸಿಕೊಳ್ಳವ ಕೆಲಸ ಆಗಬೇಕು , ಅಲ್ಲದೇ ಮಕ್ಕಳ ಮುಗ್ಧತೆಯಲ್ಲಿಯೇ ಅವರಿಗೆ ಧರ್ಮ ಸಂಸ್ಕೃತಿಗಳನ್ನು ಕಲಿಸಿದಾಗ ಅದು ಮುಂದೆ ವರವಾಗಿ ಕಾಣಲು ಸಾಧ್ಯವಾಗಿದೆ ಎಂದು ಹೇಳಿದರು.

ಕುಂಟಾರು ವಾಸುದೇವ ತಂತ್ರಿಗಳು, ಕರ್ಲಪ್ಪಾಡಿ ಶ್ರೀ ಶಾಸ್ತಾವೇಶ್ವರ ದೇವಸ್ಥಾನದ ಅಧ್ಯಕ್ಷ ರಾಜೇಶ್ ಮೇನಾಲ, ಅಜ್ಜಾವರ ಮಹಿಷಾಮರ್ದಿನಿ ದೇವಸ್ಥಾನದ ಆಡಳಿತ ಮೊಕ್ತೇಸರ ಭಾಸ್ಕರ್ ರಾವ್ ಬಯಂಬು, ಆರ್. ಎಸ್.ಎಸ್. ಕರ್ನಾಟಕ ದಕ್ಷಿಣ ಪ್ರಾಂತ ಸಹ ಸೇವಾ ಪ್ರಮುಖ್ ನ.ಸೀತಾರಾಮ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನ್ ರಾಂ ಸುಳ್ಳಿ, ಜಿಲ್ಲಾ ಧಾರ್ಮಿಕ ಪರಿಷತ್ ಮಾಜಿ ಸದಸ್ಯ ಮುರಳೀಕೃಷ್ಣ ಹಸಂತಡ್ಕ, ಜಿ.ಪಂ. ಮಾಜಿ ಸದಸ್ಯ ಹರೀಶ್ ಕಂಜಿಪಿಲಿ , ದೇರಣ್ಣ ಗೌಡ ಅಡ್ಡಂತಡ್ಕ ಭಾಗವಹಿಸಿದ್ದರು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೇಶವಮೂರ್ತಿ ಹೆಬ್ಬಾರ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸದಾನಂದ ಮಾವಜಿ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಶಿವಪ್ರಸಾದ್ ಉಗ್ರಾಣಿಮನೆ, ಪ್ರಧಾನ ಕಾರ್ಯದರ್ಶಿ ಸುರೇಶ್ ಕಣಿಮರಡ್ಕ, ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಮಾಸ್ತರ್ ವೇದಿಕೆಯಲ್ಲಿ ಇದ್ದರು.ಬ್ರಹ್ಮಕಶೋತ್ಸವ ಸಮಿತಿ ಕಾರ್ಯದರ್ಶಿ ಜಯರಾಜ್ ಕುಕ್ಕೆಟ್ಟಿ ಸ್ವಾಗತಿಸಿದರು. ನಿವೃತ್ತ ಶಿಕ್ಷಕ ಅಚ್ಯುತ ಅಟ್ಲೂರು ಕಾರ್ಯಕ್ರಮ ನಿರೂಪಿಸಿದರು.

ಹರಿಹರ ಪಲ್ಲತ್ತಡ್ಕ: ಅಶಕ್ತ ಕುಟುಂಬದ ಸಹೋದರ–ಸಹೋದರಿಗೆ ಮನೆ ನಿರ್ಮಿಸಿ ಹಸ್ತಾಂತರಿಸಿದ 'ಸಚಿನ್ ಕ್ರೀಡಾ ಸಂಘ'

ಹರಿಹರ ಪಲ್ಲತ್ತಡ್ಕ ಗ್ರಾಮದ ಮಿತ್ತಮಜಲು ಎಂಬಲ್ಲಿ ವಾಸಿಸುತ್ತಿರುವ ಶಿವರಾಮ ಆಚಾರ್ಯ ಹಾಗೂ ಅವರ ಸಹೋದರಿ ರತ್ನಾವತಿ ಅವರಿಗೆ ಹ–ರಿಹರ ಪಲ್ಲತ್ತಡ್ಕದ ಸಚಿನ್ ಕ್ರೀಡಾ ಸಂಘದ ಸದಸ್ಯರು ಮನೆ ನಿರ್ಮಿಸಿದ್ದು, ಮೇ.1ರಂದು ಮನೆಯ ಹಸ್ತಾಂತರ ಕಾರ್ಯಕ್ರಮ ನಡೆಯಿತು. ದಾನಿಗಳ ಸಹಕಾರದಿಂದ ಸಚಿನ್ ಕ್ರೀಡಾ ಸಂಘದ ಸದಸ್ಯರೇ ಹಗಲು–ರಾತ್ರಿ ಶ್ರಮಸೇವೆಯ ಮೂಲಕ ಮನೆಯನ್ನು ನಿರ್ಮಾಣ ಮಾಡಿದ್ದು, ಇಂದು ಗೃಹಪ್ರವೇಶ ಕಾರ್ಯಕ್ರಮ ಮುಗಿಸಿ ಮನೆಯನ್ನು ಶಿವರಾಮ ಆಚಾರ್ಯ ಹಾಗೂ ಅವರ ಸಹೋದರಿ ರತ್ನಾವತಿ ಅವರಿಗೆ ಹಸ್ತಾಂತರಿಸಿದರು. ಗಿರೀಶ್ ಆಚಾರ್ಯ ಪೈಲಾಜೆ ಅವರು ಮನೆಯ ಗುತ್ತಿ ಪೂಜೆ ನೆರವೇರಿಸಿ, ಕೇಶವಮೂರ್ತಿ ಪಲ್ಲತ್ತಡ್ಕ ಅವರು ಗಣಹೋಮ ನಡೆಸಿಕೊಟ್ಟರು.ಈ ಸಂದರ್ಭದಲ್ಲಿ ಸಚಿನ್ ಕ್ರೀಡಾ ಸಂಘದ ಅಧ್ಯಕ್ಷರಾದ ಪ್ರದೀಪ್ ಕಜ್ಜೋಡಿ ಹಾಗೂ ಸಂಘದ ಕಾರ್ಯದರ್ಶಿ, ಕೋಶಾಧಿಕಾರಿ ಮತ್ತು ಸರ್ವಸದಸ್ಯರು ಹಾಗೂ ದಾನಿಗಳು ಉಪಸ್ಥಿತರಿದ್ದರು.

ರಾಜ್ಯಕ್ಕೆ 5ನೇ ಸ್ಥಾನ ಪಡೆದ ವಿದ್ಯಾರ್ಥಿನಿ ದುರ್ಗಾಲಕ್ಷ್ಮಿ ಭೇಟಿ ಮಾಡಿ ಅಭಿನಂದಿಸಿದ ಶಾಸಕಿ ಭಾಗೀರಥಿ ಮುರುಳ್ಯ

ದ್ವಿತೀಯ

ಸುಳ್ಯ: ಗ್ಯಾರೇಜ್ ಮ್ಹಾಲಕರ ಸಂಘದ ಬೆಳ್ಳಿ ಹಬ್ಬ ಆಚರಣೆ ಹಾಗೂ ಮಹಾಸಭೆಯ ಆಮಂತ್ರಣ ಪತ್ರ ಬಿಡುಗಡೆ

ದ.ಕ ಜಿಲ್ಲಾ ಗ್ಯಾರೇಜ್ ಮ್ಹಾಲಕರ ಸಂಘ ಮಂಗಳೂರು ಇದರ ಆಶ್ರಯದಲ್ಲಿ ಸುಳ್ಯ ತಾಲೂಕು ಗ್ಯಾರೇಜ್ ಮ್ಹಾಲಕರ ಸಂಘದ ಬೆಳ್ಳಿ ಹಬ್ಬ ಆಚರಣೆ ಹಾಗೂ 25 ನೇ ವರ್ಷದ ವಾರ್ಷಿಕ ಮಹಾಸಭೆ ಮತ್ತು ಕುಟುಂಬ ಸಮ್ಮಿಲನ ಕಾರ್ಯಕ್ರಮವು ಮೇ.26 ರಂದು ಸುಳ್ಯದ ಲಯನ್ಸ್ ಸೇವಾ ಸದನದಲ್ಲಿ ನಡೆಯಲಿದೆ.

ಇದರ ಪೂರ್ವಭಾವಿಯಾಗಿ ಆಮಂತ್ರಣ ಪತ್ರ ಬಿಡುಗಡೆಯು ಕಲ್ಕುಡ ದೈವಸ್ಥಾನದಲ್ಲಿ ಎ.28 ರಂದು ನಡೆಯಿತು. ದೈವಸ್ಥಾನದ ಪೂಜಾರಿ ತಿಮ್ಮಪ್ಪ ಗೌಡ ರವರು ಪ್ರಾರ್ಥನೆ ನೆರವೇರಿಸಿದರು. ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಎಂ.ಮಲ್ಲೇಶ್ ಬೆಟ್ಟಂಪಾಡಿ, ಪ್ರಧಾನ ಕಾರ್ಯದರ್ಶಿ ಜನಾರ್ದನ ದೋಳ, ಉಪಾಧ್ಯಕ್ಷ ಸತ್ಯನಾರಾಯಣ ಪೈಚಾರು, ನಿರ್ದೇಶಕ ನಾಗೇಶ್ ಕೇರ್ಪಳ, ಜತೆ ಕಾರ್ಯದರ್ಶಿ ಮನೋಹರ ಬೊಳ್ಳೂರು, ಮಾಜಿ ಅಧ್ಯಕ್ಷ ಡಿ.ಎನ್.ವೆಂಕಟ್ರಮಣ, ಧನಂಜಯ ಗುತ್ತಿಗಾರು, ರಘುರಾಮ ಜಟ್ಟಿಪಳ್ಳ, ಹರೀಶ್ ಅರಂಬೂರು, ಕಮಲಾಕ್ಷ ಕಲ್ಲುಗುಂಡಿ ಹಾಗೂ ಪದಾಧಿಕಾರಿಗಳು ಮತ್ತು ಸದಸ್ಯರು ಉಪಸ್ಥಿತರಿದ್ದರು.

ಮಂಡೆಕೋಲು : ಬ್ರಹ್ಮಕಲಶೋತ್ಸವ ಅಂಗವಾಗಿ ಧಾರ್ಮಿಕ ಸಭೆ – ಕೈಗೊಳ್ಳುವ ಕಾರ್ಯ ದೇವರ ಪ್ರೀತಿಗೆ ಅರ್ಹವಾಗುವಂತಿರಲಿ – ರಾಮಕೃಷ್ಣ ಭಟ್

ನಾವು ಮಾಡುವ ಎಲ್ಲಾ ಕೆಲಸಗಳು ಭಗವಂತನ ಪ್ರೀತಿಗೆ ಅರ್ಹವಾಗುವಂತಿರಬೇಕು. ಹಾಗಿದ್ದರೆ ಮಾತ್ರ ಪಡೆದಿರುವ ಶ್ರೇಷ್ಠ ಜನ್ಮಕ್ಕೆ ನೈಜ ಅರ್ಥ ದೊರಕಲು ಸಾಧ್ಯ ಎಂದು ಬೆಳ್ತಂಗಡಿಯ ಗಮಕ ಕಲಾ ಪರಿಷತ್ ನ ಅಧ್ಯಕ್ಷ ರಾಮಕೃಷ್ಣ ಭಟ್ ತಿಳಿಸಿದರು.

ಅವರು ಮಂಡೆಕೋಲು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನದ ಬ್ರಹ್ಮಕಲಶೋತ್ಸವದ ಪ್ರಯುಕ್ತ ಆಯೋಜನೆಗೊಂಡ ಎರಡನೇ ದಿನದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಧಾರ್ಮಿಕ ಉಪನ್ಯಾಸ ನೀಡಿ ಮಾತನಾಡಿದರು. ದೇವರು ಇರುವ ಸ್ಥಾನವೇ ದೇವಸ್ಥಾನ. ಅದರಲ್ಲಿ ಸಣ್ಣದು, ದೊಡ್ಡದು ಎನ್ನುವ ಭೇದ ಭಾವಗಳಿಲ್ಲ. ಸಮರ್ಪಣಾ ಭಾವದಿಂದ ಯಾವುದೇ ಕೆಲಸ ಮಾಡಿದರೆ ಆ ಕೆಲಸದಲ್ಲಿ ಯಶಸ್ಸು ಗಳಿಸಲು ಸಾಧ್ಯವಾಗುತ್ತದೆ. ಆ ನಿಟ್ಟಿನಲ್ಲಿ ನಾವು ಕೈಗೊಳ್ಳುವ ಎಲ್ಲಾ ಕಾರ್ಯಗಳು ಸಾಗಬೇಕು ಎಂದವರು ತಿಳಿಸಿದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಸ್ಥಾದ ವ್ಯವಸ್ಥಾಪನಾ ಸಮಿತಿಯ ಮಾಜಿ ಅಧ್ಯಕ್ಷ ನಿತ್ಯಾನಂದ ಮುಂಡೋಡಿ ಮಾತನಾಡಿ ಭಕ್ತಿಯಿಂದ, ಶ್ರದ್ಧೆಯಿಂದ ಭಗವಂತನನ್ನು ಸ್ತುತಿಸಿದರೆ ಆತನ ಆಶೀರ್ವಾದ ಸದಾ ಇರುತ್ತದೆ. ಇತ್ತೀಚೆಗೆ ಧಾರ್ಮಿಕ ಶ್ರದ್ಧಾ ಕೇಂದ್ರಗಳು ಜೀರ್ಣೋದ್ಧಾರಗೊಂಡು ಬ್ರಹ್ಮಕಲಶೋತ್ಸವ ಕಾರ್ಯಕ್ರಮಗಳು ನಡೆಯುತ್ತಿರುವುದು ಉತ್ತಮ ಬೆಳವಣಿಗೆ ಎಂದರು. ಮುಖ್ಯ ಅತಿಥಿಯಾಗಿ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದ ಅಡೂರು ಶ್ರೀ ಮಹಾಲಿಂಗೇಶ್ವರ ದೇವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ವಸಂತ ಪೈ ಮಾತನಾಡಿ ಜೀವಿತ ಕಾಲದ ಪಾಪ ಪುಣ್ಯಗಳಿಗೆ ತಕ್ಷಣವೇ ಫಲಿತಾಂಶ ಒದಗುವ ಕಾಲಘಟ್ಟದಲ್ಲಿ ನಾವಿರುವ ಕಾರಣ ಪ್ರತಿಯೊಬ್ಬರೂ ಸತ್ಕಾರ್ಯಗಳಲ್ಲಿ ತೊಡಗಿಕೊಳ್ಳಬೇಕು ಎಂದರು. ಕಾರ್ಯಕ್ರಮದ ಅಧ್ಯಕ್ಷತೆಯನ್ನು ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಶಿವಪ್ರಸಾದ್ ಉಗ್ರಾಣಿಮನೆ ಮಹಿಸಿದ್ದರು.

ಕಾರ್ಯಕ್ರಮದ ವೇದಿಕೆಯಲ್ಲಿ ವೆಂಕಟ್ರಮಣ ಕ್ರೆಡಿಟ್ ಕೋ-ಆಪರೇಟಿವ್ ಸೊಸೈಟಿಯ ಅಧ್ಯಕ್ಷ ಪಿ. ಸಿ ಜಯರಾಮ, ಸಿ. ಎ ಬ್ಯಾಂಕ್ ನ ಅಧ್ಯಕ್ಷ ವಿಕ್ರಂ ಅಡ್ಪಂಗಾಯ, ನ್ಯಾಯವಾದಿ ಶ್ರೀಕಾಂತ್, ಅಡ್ಕಾರು ಗಣೇಶ್ ಕ್ಯಾಶ್ಯೂಸ್ ನ ಮಾಲಕ ಸುಧಾಕರ ಕಾಮತ್, ದೇಗುಲದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಕೇಶವಮೂರ್ತಿ ಹೆಬ್ಬಾರ್, ಕಣಿಮರಡ್ಕ ವಿಷ್ಣುಮೂರ್ತಿ ದೈವಸ್ಥಾನದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಪೂರ್ಣಚಂದ್ರ ಕಣಿಮರಡ್ಕ ಹಾಗೂ ಬ್ರಹ್ಮಕಲಶೋತ್ಸವ ಸಮಿತಿಯ ಪ್ರಧಾನ ಕಾರ್ಯದರ್ಶಿ ಸುರೇಶ್ ಕಣಿಮರಡ್ಕ ಉಪಸ್ಥಿತರಿದ್ದರು.

ದೇಗುಲದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸದಾನಂದ ಮಾವಜಿ ಅತಿಥಿಗಳನ್ನು ಸ್ವಾಗತಿಸಿದರು.ಬ್ರಹ್ಮಕಲಶೋತ್ಸವದ ಆರ್ಥಿಕ ಸಮಿತಿಯ ಸಂಚಾಲಕ ಉದಯಕುಮಾರ್ ಆಚಾರ್ ವಂದಿಸಿದರು. ಅಚ್ಯುತ ಅಟ್ಲೂರು ಹಾಗೂ ಗಣೇಶ್ ಆಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಕಾರ್ಯಕ್ರಮದ ಅಂಗವಾಗಿ ಸಾರ್ವಜನಿಕರಿಂದ ಪ್ರದರ್ಶಿಸಲ್ಪಟ್ಟ ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ನೃತ್ಯ ವಿದುಷಿ ಕು. ಅಪೂರ್ವ ಪಾವೂರು ಮತ್ತು ಬಳಗದವರಿಂದ ನಡೆದ ನೃತ್ಯ ವೈವಿಧ್ಯ ಕಾರ್ಯಕ್ರಮ ನೆರೆದವರ ಮನರಂಜಿಸಿತು. ಎ.29ರಂದು ಗ್ರಂಥಾಲಯದ ಪ್ರಟಾಣಿಗಳಿಂದ ಯಕ್ಷಗಾನ ಕಳೆದ ಕೆಲ ತಿಂಗಳುಗಳಿಂದ ಊರಿನ ಪ್ರಟಾಣಿ ಮಕ್ಕಳು ಯಕ್ಷಗುರುಗಳಾದ ಯೋಗೀಶ್ ಶರ್ಮ ಅಳದಂಗಡಿ ಅವರ ಮಾರ್ಗದರ್ಶನದಲ್ಲಿ ಸೋಮವಾರ ಬ್ರಹ್ಮಕಲಶೋತ್ಸವದ ಸಾಂಸ್ಕೃತಿಕ ವೇದಿಕೆಯಲ್ಲಿ ಏಕಾದಶಿ ದೇವಿ ಮಹಾತ್ಮೆ' ಎಂಬ ಪ್ರಸಂಗವನ್ನು ಆಡಿತೋರಿಸಿದರು. ಬಳಿಕ ಮಂಗಳಾ ದೇವಿ ಮೇಳದ ಕಲಾವಿದರಿಂದ 'ಸಾರ್ಲಪಟ್ಟಿದ ಸತ್ಯ' ಎಂಬ ಯಕ್ಷಗಾನ ಬಯಲಾಟ ನಡೆಯಿತು.

ಭವಿಷಿತ್ ಮಡ್ತಿಲರವರಿಗೆ ಪಿಯುಸಿಯಲ್ಲಿ ಡಿಸ್ಟಿಂಕ್ಷನ್

ಮಂಗಳೂರು ಮೊರಾರ್ಜಿ ದೇಸಾಯಿ ಪದವಿಪೂರ್ವ ವಸತಿ ಕಾಲೇಜಿನ ವಿದ್ಯಾರ್ಥಿ ಭವಿಷಿತ್ ಎಂ.ಡಿ.ಮಡ್ತಿಲ ರವರು ದ್ವಿತೀಯ ಪಿಯುಸಿ ವಿಜ್ಞಾನ ವಿಭಾಗದಲ್ಲಿ 533 ಅಂಕ ಡಿಸ್ಟಿಂಕ್ಷನ್ ಪಡೆದಿದ್ದಾರೆ. ಇವರು ಐವರ್ನಾಡು ಗ್ರಾಮದ ಮಡ್ತಿಲ ದಾಮೋದರ ಗೌಡ ಮತ್ತು ಶ್ರೀಮತಿ ಗೀತಾ ದಂಪತಿ ಪುತ್ರ.

ವಿದೇಶದಿಂದ ಆಗಮಿಸಿ ತನ್ನ ಕರ್ತವ್ಯವನ್ನು ಮೆರೆದ ದಿನಕರ್ ಕುಕ್ಕಾಜೆ



ಇಡೀ ವಿಶ್ವದಲ್ಲಿಯೇ ಅತೀ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರವಾದ ಭಾರತ ಲೋಕಸಭಾ ಚುನಾವಣೆಗೆ ದಿನಾಂಕ ನಿಗದಿ ಪಡಿಸಿ ಕರ್ನಾಟಕದ ಕೆಲ ಕ್ಷೇತ್ರಗಳು ಸೇರಿದಂತೆ ಎ.26ರಂದು ಮತದಾನ ನಡೆಯಿತು. ಈ ಮಹತ್ ಕಾರ್ಯದಲ್ಲಿ ಸುಳ್ಯದ ದಿನಕರ ಕುಕ್ಕಾಜೆಕಾನ ಎಂಬುವವರು ಶಾಂತಿನಗರ ಬೂತ್ ನಂಬರ್ 177ರ ಮತದಾರರಾಗಿದ್ದು ಇವರು ದುಬೈಯ ಧೀರದಲ್ಲಿ ವೃತ್ತಿ ಜೀವನ ನಡೆಸುತ್ತಿದ್ದು ಲೋಕ ಸಭ ಚುನಾವಣೆಯಲ್ಲಿ ತನ್ನ ಕರ್ತವ್ಯವನ್ನು ಮೆರೆದು ಸಾಗಾರದಾಟಿ ಬಂದು ತಮ್ಮ ಹಕ್ಕನ್ನು ಚಲಾಯಿಸುವ ಮೂಲಕ ಮಾದರಿಯಾದರು.

ಸುಬ್ರಹ್ಮಣ್ಯ ಸೀನಿಯರ್ ಚೇಂಬರ್ ಘಟಕದ ಅಧ್ಯಕ್ಷರಾಗಿ ಡಾ। ರವಿ ಕಕ್ಕೆಪದವು, ಕಾರ್ಯದರ್ಶಿಯಾಗಿ ಮೋನಪ್ಪ.ಡಿ, ಕೋಶಾಧಿಕಾರಿಯಾಗಿ ಪ್ರಕಾಶ್ ಕಟ್ಟೆಮನೆ ಆಯ್ಕೆ

ಸೀನಿಯರ್ ಚೇಂಬರ್ ಇಂಟರ್ನ್ಯಾಷನಲ್ ಸುಬ್ರಹ್ಮಣ್ಯ ಲೀಜನ್ 2024–25ನೇ ಸಾಲಿನ ನೂತನ ಅಧ್ಯಕ್ಷರಾಗಿ ಡಾ। ರವಿ ಕಕ್ಕೆಪದವು ಅವರು ಆಯ್ಕೆಯಾಗಿರುತ್ತಾರೆ. ಕಾರ್ಯದರ್ಶಿಯಾಗಿ ಸುಬ್ರಹ್ಮಣ್ಯ ಗ್ರಾಮ ಪಂಚಾಯತ್ ಕಾರ್ಯದರ್ಶಿ ಮೋನಪ್ಪ.ಡಿ, ಕೋಶಾಧಿಕಾರಿಯಾಗಿ ಸುಬ್ರಹ್ಮಣ್ಯ–ಐನೆಕಿದು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘದ ಮುಖ್ಯ ಕಾರ್ಯನಿರ್ವಹಣಾಧಿಕಾರಿಗಳಾದ ಪ್ರಕಾಶ್ ಕಟ್ಟೆಮನೆ ಇವರು ಆಯ್ಕೆಯಾಗಿರುತ್ತಾರೆ. ಲೀಜನ್ ನಿಕಟಪೂರ್ವ ಹಾಗೂ ಸ್ಥಾಪಕಾಧ್ಯಕ್ಷರಾಗಿ ಸೀನಿಯರ್ ವಿಶ್ವನಾಥ ನಡುತೋಟ ಹಾಗೂ ನಿರ್ದೇಶಕ ಮತ್ತು ಸದಸ್ಯರುಗಳಾಗಿ ಸೀನಿ.ಚಂದ್ರಶೇಖರ ನಾಯರ್, ಸೀನಿ.ಲೋಕೇಶ್.ಬಿ.ಎನ್, ಸೀನಿ.ಪ್ರಭಾಕರ ಪಡ್ತೆ, ಸೀನಿ.ಪ್ರಕಾಶ್ ಸುಬ್ರಹ್ಮಣ್ಯ, ಸೀನಿ. ಗೋಪಾಲ್ ಎಣ್ಣೆಮಜಲು, ಸೀನಿ.ಮಾಧವ ದೇವರಗದ್ದೆ, ಸೀನಿ.ಪ್ರಶಾಂತ್ ಕೋಡಿಬೈಲು, ಸೀನಿ.ಲೀಲಾ ವಿಶ್ವನಾಥ್, ಸೀನಿ. ಮಾಲಿನಿ ಲೋಕೇಶ್, ಸೀನಿ.ಅಶೋಕ್ ಮೂಲೆಮಜಲು ಇವರುಗಳು ಆಯ್ಕೆಯಾಗಿರುತ್ತಾರೆ.

ಸುಳ್ಯ ಶಾಸಕಿಯಿಂದ ಮತ ಚಲಾವಣೆ

ಲೋಕಸಭಾ ಚುನಾವಣೆಯಲ್ಲಿ ಶಾಂತಿನಗರ ಮುರುಳ್ಯ ಸರಕಾರಿ ಹಿರಿಯ ಪ್ರಾಥಮಿಕ ಶಾಲೆಯಲ್ಲಿ ಶಾಸಕರಾದ ಕು.ಭಾಗೀರಥಿ ಮುರುಳ್ಯ ಮತದಾನ ಮಾಡಿದರು. ಬೆಳಗ್ಗೆ ಸರತಿಯ ಸಾಲಿನಲ್ಲಿ ನಿಂತು ಬಳಿಕಮತದಾನ ಮಾಡಿದರು.

ಕಾಂಗ್ರೆಸ್ ಅಭ್ಯರ್ಥಿ ಪದ್ಮರಾಜ್ ಆರ್.ಪೂಜಾರಿ ಭೇಟಿ

ಐವರ್ನಾಡು ಗ್ರಾಮ ಬಾಂಜಿಕೋಡಿ ವಾರ್ಡ್ ಗೆ ಕಾಂಗ್ರೆಸ್ ಅಭ್ಯರ್ಥಿ ಪದ್ಮರಾಜ್ ಆರ್ ಪೂಜಾರಿ ಭೇಟಿ ನೀಡಿ ಕಾರ್ಯಕರ್ತರ ಜತೆ ಮಾತುಕತೆ ನಡೆಸಿದರು.

ನೆಲ್ಲೂರು ಕೆಮ್ರಾಜೆ ಗ್ರಾಮ ಪಂಚಾಯತ್

ಏಲಂ ಪ್ರಕಟಣೆ

ದಿನಾಂಕ: 30/04/2024

ನೆಲ್ಲೂರು ಕೆಮ್ರಾಜೆ ಪಂಚಾಯತಿಯ ಅಧೀನಕ್ಕೊಳಪಟ್ಟ ಅಂಗಡಿ ಕೋಣೆ ಕಟ್ಟಡ ಸಂಖ್ಯೆ 2–46/1 ನ್ನು 3 ವರ್ಷದ ಅವಧಿಗೆ ಏಲಂ ನಡೆಸುವುದಾಗಿ ತೀರ್ಮಾನಿಸಲಾಗಿದ್ದು. ಆದ್ದರಿಂದ ಸದ್ರಿ ಅಂಗಡಿ ಕೋಣೆಗಳನ್ನು ಪಡೆದುಕೊಳ್ಳಲಿಚ್ಛಿಸುವವರು ಈ ಕೆಳಗೆ ಕಾಣಿಸಿದ ದಿನಾಂಕದಂದು ಹಾಜರಿರುವಂತೆ ಕೋರಿದೆ.

ಏಲಂ ನಡೆಯುವ ದಿನಾಂಕ	ಸ್ಥಳ	ಸಮಯ	ಕೊಠಡಿಗಳ ಸಂಖ್ಯೆ	ಕಟ್ಟಡದ ವಿವರ ಮತ್ತು ಏಲಂ ಅವಧಿ
7.05.2024 ನೇ ಮಂಗಳವಾರ	ಗ್ರಾಮ ಪಂಚಾಯತ್ ಕಛೇರಿ ನೆಲ್ಲೂರು ಕೆಮ್ರಾಜೆ	ಪೂರ್ವಾಹ್ನ ಘಂಟೆ 11.00	1	ಎತ್ತಿನಹೊಳೆ ಬಸ್ಸು ತಂಗುದಾಣದ ಅಂಗಡಿ ಕಟ್ಟಡ

ಷರತ್ತುಗಳಿಗಾಗಿ ಗ್ರಾಮ ಪಂಚಾಯ್ ಕಛೇರಿಯನ್ನು ಕಛೇರಿ ವೇಳೆಯಲ್ಲಿ ಸಂಪರ್ಕಿಸಬಹುದು.

ಸಹಿ/.
ಅಧ್ಯಕ್ಷರು
ನೆಲ್ಲೂರು ಕೆಮ್ರಾಜೆ ಗ್ರಾಮ ಪಂಚಾಯತ್

ಸಹಿ/.
ಪಂಚಾಯತ್ ಅಭಿವೃದ್ಧಿ ಅಧಿಕಾರಿ
ನೆಲ್ಲೂರು ಕೆಮ್ರಾಜೆ ಗ್ರಾಮ ಪಂಚಾಯತ್

ರಾಜ್ಯಕ್ಕೆ ಪದವಿ ಪೂರ್ವ ವಿಭಾಗದಲ್ಲಿ ನಾಲ್ಕನೇ ರ್ಯಾಂಕ್ ಗಳಿಸಿದ ಸುಬ್ರಹ್ಮಣ್ಯದ ದಿಶಾಗೆ ಸನ್ಮಾನ

2024– 25 ನೇ ಸಾಲಿನಲ್ಲಿ ರಾಜ್ಯ ಪದವಿ ಪೂರ್ವ ಶಿಕ್ಷಣ ಇಲಾಖೆ ವತಿಯಿಂದ ನಡೆದ ದ್ವಿತೀಯ ಪಿಯುಸಿ ವಾಣಿಜ್ಯ ವಿಭಾಗದಲ್ಲಿ ಶೇಕಡ 99 ಅಂಕಗಳಿಸಿ ರಾಜ್ಯಕ್ಕೆ ನಾಲ್ಕನೇ ರಾಂಕ್ ಗಳಿಸಿದ ಸುಬ್ರಹ್ಮಣ್ಯದ ಕುಮಾರಸ್ವಾಮಿ ವಿದ್ಯಾಲಯದ ವಿದ್ಯಾರ್ಥಿನಿ ಕು। ದಿಶಾ .ಎಸ್ ಅವರಿಗೆ ಡಾ। ರವಿ ಕಕ್ಕೆಪದವ್ ಸಮಾಜ ಸೇವಾ ಟ್ರಸ್ಟ್ ಹಾಗೂ ಸೀನಿಯರ್ ಚೇಂಬರ್ ಇಂಟರ್ನ್ಯಾಷನಲ್ ಸುಬ್ರಮಣ್ಯ ಘಟಕದ ವತಿಯಿಂದ ಗೌರಾರ್ಪಣೆ ಸನ್ಮಾನ ಮಾಡಲಾಯಿತು.

ಸುಬ್ರಹ್ಮಣ್ಯದ ಕಲಾವಿದ ಸಮಾಜಸೇವಕ ಯಜ್ಞೇಶ್ ಆಚಾರ್ ಅವರು ಕುಮಾರಿ ದಿಶಾಳನ್ನು ಸನ್ಮಾಸಿದರು. ಈ ಸಂದರ್ಭದಲ್ಲಿ ರವಿ ಕಕ್ಕೆಪದವು ಸಮಾಜ ಸೇವಾ ಟ್ರಸ್ಟಿನ ಸಂಸ್ಥಾಪಕ ಡಾ। ರವಿಕಕ್ಕೆಪದವು, ಗೀತಾ ರವಿ ಕಕ್ಕೆಪದವು, ಅರ್ಜುನ್, ಅಮೃತ ಲಕ್ಷ್ಮಿ, ಚಿನ್ಮಯ್, ಕಚೇರಿ ಸಿಬ್ಬಂದಿ ರಮ್ಯಾ, ಬಿಎಂಎಸ್ ಆಟೋ ಚಾಲಕ ಮಾಲಕ ಸಂಘದ ಅಧ್ಯಕ್ಷ ದಿನೇಶ್ ದೇವರ ಗದ್ದೆ, ಷಣ್ಮುಖ ಉಪಾರಣ ದಂಪತಿಗಳು, ಉಪಸ್ಥಿತರಿದ್ದರು. ಸುಬ್ರಹ್ಮಣ್ಯ ರೋಟರಿ ಕ್ಲಬ್ಬಿನ ಪೂರ್ವ ಅಧ್ಯಕ್ಷ ರೋ ಗೋಪಾಲ್ ಎಣ್ಣೆ ಮಜಲ್ ಸನ್ಮಾನ ಪತ್ರ ವಾಚಿಸಿದರು. ಸೀನಿಯರ್ ಚೇಂಬರ್ ಇಂಟರ್ನ್ಯಾಷನಲ್ ಸುಬ್ರಹ್ಮಣ್ಯ ಘಟಕದ ಸ್ಥಾಪಕ ಅಧ್ಯಕ್ಷ ಸೀನಿಯರ್. ವಿಶ್ವನಾಥ ನಡತೋಟ ಸ್ವಾಗತಿಸಿ ನಿರೂಪಿಸಿದ ಕಾರ್ಯಕ್ರಮದ ಕೊನೆಯಲ್ಲಿ ರೋಟರಿ ಕ್ಲಬ್ಬಿನ ಪೂರ್ವ ಅಧ್ಯಕ್ಷ ವಿಜಯಕುಮಾರ ಧನ್ಯವಾದ ಸಮರ್ಪಿಸಿದರು.

ಬ್ರಹ್ಮಕಲಶೋತ್ಸವ ಸಂಭ್ರಮದಲ್ಲಿ ಮಂಡೆಕೋಲು ಮಹಾವಿಷ್ಣುಮೂರ್ತಿ ದೇವಸ್ಥಾನ – ಭಕ್ತರಿಂದ ಹಸಿರುವಾಣಿ ಸಮರ್ಪಣೆ

ಇತಿಹಾಸ ಪ್ರಸಿದ್ಧ ಮಂಡೆಕೋಲು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನ ಈಗಾಗಲೇ ಬ್ರಹ್ಮಕಲಶೋತ್ಸವ ಕಾರ್ಯಕ್ರಮಕ್ಕಾಗಿ ಶೃಂಗಾರಗೊಂಡಿದ್ದು ಶನಿವಾರ ಬೆಳಿಗ್ಗೆ ಊರ, ಪರ ಊರ ಭಕ್ತಾದಿಗಳಿಂದ ದೇಗುಲಕ್ಕೆ ಹಸಿರುವಾಣಿ ಸಮರ್ಪಣೆಯಾಯಿತು.

ಬೆಳಿಗ್ಗೆ ಅಯ್ಯಪ್ಪ ಸ್ವಾಮಿ ಭಜನಾ ಮಂದಿರದಿಂದ ಹೊರಟ ಹಸಿರುವಾಣಿ ಮೆರವಣಿಗೆಯ ವಾಹನದ ಮುಂದೆ ತೆಂಗಿನ ಕಾಯಿ ಒಡೆಯುವ ಮೂಲಕ ದೇಗುಲದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸದಾನಂದ ಮಾವಜಿ ಮೆರವಣಿಗೆಗೆ ಚಾಲನೆ ನೀಡಿದರು.

ಡೊಳ್ಳು, ಕೇರಳದ ಚೆಂಡೆ ಹಾಗೂ ಕುಣಿತ ಭಜನಾ ತಂಡಗಳು ಪಾಲ್ಗೊಂಡು ಮೆರವಣಿಗೆಗೆ ಮೆರುಗು ನೀಡಿದವು. ಮಹಿಳೆಯರು ಸಾಂಪ್ರದಾಯಿಕ ಉಡುಗೆಗೆ ತೊಟ್ಟು ಬುಟ್ಟಿಯಲ್ಲಿ ಹಸಿರುವಾಣಿ ಹೊತ್ತುಕೊಂಡು ಸಂಭ್ರಮಿಸಿದರೆ ಪುರುಷರು ಕೂಡಾ ಸಾಂಪ್ರದಾಯಿಕ ಉಡುಗೆಯಲ್ಲಿ ಮಿಂಚಿದರು. ಬೆಳಿಗ್ಗೆ 6 ಕ್ಕೆ ದೇಗುಲದಲ್ಲಿ ಗಣಪತಿ ಹೋಮ, ಪ್ರಾಯಶ್ಚಿತ ಹೋಮ, ಬಿಂಬ ಶುದ್ಧಿ ನಡೆಯಲಿದೆ. ಭಕ್ತ ಸಮೂಹದಲ್ಲಿ ಹರಿ ನಾಮಸ್ಮರಣೆ ಜಾಗೃತಗೊಳಿಸಲು ದೇಗುಲದ ವತಿಯಿಂದ ಆಯೋಜಿಸಲಾದ ಕೋಟಿ ಲೇಖನ ಯಜ್ಞ ಅಭಿಯಾನದ ಸಮಾರೋಪ ಕಾರ್ಯಕ್ರಮವೂ ನಡೆಯಿತು. ಮಧ್ಯಾಹ್ನ 12 ಕ್ಕೆ ಅಂಕುರ ಪೂಜೆ ಹಾಗೂ ಮಹಾಪೂಜೆಯ ಬಳಿಕ ಅನ್ನಸಂತರ್ಪಣೆ ನಡೆಯಿತು.

ಸಂಜೆ 5 ರಿಂದ ಶಾಲಾ ಮಕ್ಕಳಿಂದ ಹಾಗೂ ಸ್ಥಳೀಯ ಕಲಾವಿದರಿಂದ ನಡೆದ ಸಾಂಸ್ಕೃತಿಕ ಸಂಭ್ರಮ ನೆರೆದವರ ಮನ ರಂಜಿಸಿತು.

ಸುಬ್ರಹ್ಮಣ್ಯದಲ್ಲಿ ಮಯೂರ ಕನ್‌ಕ್ಟಕ್ಷನ್ ಆಗೋ ಕನ್ಸಲ್ಟೆನ್ಸಿ ಉದ್ಘಾಟನೆ



ಸುಬ್ರಹ್ಮಣ್ಯದಲ್ಲಿ ಮಯೂರ ಕನ್‌ಕ್ಟಕ್ಷನ್ ಆಗೋ ಕನ್ಸಲ್ಟೆನ್ಸಿ ಉದ್ಘಾಟನೆ. ಸುಬ್ರಹ್ಮಣ್ಯದ ಕಾಶಿ ಕಟ್ಟೆ ಬಳಿ ಇರುವ ಮೋಂಟಿ ಕಾಂಪ್ಲೆಕ್ಸ್ ನ ಪ್ರಥಮ ಮಹಡಿಯಲ್ಲಿ ಇಂದು ಆದಿತ್ಯವಾರ ಅಭಿಷೇಕ್ ನಡುತೋಟ ಅವರ ಮಾಲಕತ್ವದ ಮಯೂರ ಕನ್ಸಲ್ಟೆನ್ಸಿ ಹಾಗೂ ಕನ್‌ಕ್ಟಕ್ಷನ್ಸ್ ಕಚೇರಿ ಶುಭಾರಂಭಗೊಂಡಿತು. ನಡುತೋಟ ಕುಟುಂಬದ ಹಿರಿಯರು ನಿವೃತ್ತ ಉಪನ್ಯಾಸಕರಾದ ನೀಲಪ್ಪಗೌಡ ನಡುತೋಟ ಟೇಪ್ ಕತ್ತರಿಸುವುದರ ಮೂಲಕ ಉದ್ಘಾಟಿಸಿದರು. ರವಿ ಕಕ್ಕೆಪದವು ಸಮಾಜ ಸೇವಾ ಟ್ರಸ್ಟ್‌ನ ಸಂಸ್ಥಾಪಕರಾದ ಡಾ। ರವಿ ಕಕ್ಕೆ ಪದವು ಅವರು ದೀಪ ಬೆಳಗಿಸುವುದರ ಮೂಲಕ ಕಚೇರಿ ಗೆ ಚಾಲನೆ ನೀಡಿದರು.

ಈ ಸಂದರ್ಭದಲ್ಲಿ ವಿಶ್ವನಾಥ ನಡುತೋಟ, ಗಿರಿಧರ ನಡುತೋಟ, ವಿಜಯಕುಮಾರ ನಡುತೋಟ, ಶ್ರೀಮತಿ ಶಾಂತಿ, ಸುಮತಿ, ಲೀಲಾ, ಅನಿತಾ, ಗೀತಾ, ಕಾರ್ತಿಕ್ ನಡುತೋಟ ಮತ್ತಿತರರು ಉಪಸ್ಥಿತರಿದ್ದರು.

ಪಾತಿಕಲ್ಲು ಹರಿಶ್ಚಂದ್ರರ ಮನೆಗೆ ಧರ್ಮಪಾಲನಾಥ ಸ್ವಾಮೀಜಿ ಭೇಟಿ

ಮ

ನವನಾರಿ ಶಕ್ತಿಯರಿಂದ ಮತದಾನ

ಪ್ರತಿ ಚುನಾವಣಾ ಬೂತ್ ಗಳಲ್ಲಿ ನವ ಶಕ್ತಿ ನಾರಿಯರು ಎಂಬ ಪರಿಕಲ್ಪನೆಯಡಿಯಲ್ಲಿ ಮತಚಲಾವಣೆ ಮಾಡಿದರು.

ಭಾಗೀರಥಿ ಮುರುಳ್ಯರವರ ತಂಡ

ಪುಷ್ಪಾ ಮೇದಪ್ಪರವರ ತಂಡ

ಸತ್ಯವತಿ ಬಸವನಪಾದೆರವರ ತಂಡ

ಮನೆಯಂಗಳದ ಬಾವಿಮಣ್ಣು ಕುಸಿತ- ಅಪಾಯಕಾರಿ ಸ್ಥಿತಿಯಲ್ಲಿ ಮನೆ; ಸ್ಥಳಕ್ಕೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಭೇಟಿ

ಬಾವಿಯಲ್ಲಿ ನೀರು ಸಂಪೂರ್ಣವಾಗಿ ಬತ್ತಿಹೋಗಿ-ತ್ತು. ನಿನ್ನೆ ಬೆಳಗ್ಗೆ ಇದ್ದಕ್ಕಿದ್ದಂತೆ ಬಾವಿಯಲ್ಲಿ ನೀರು ತುಂಬುತ್ತಿದ್ದು ರಿಂಗ್ ಅಳವಡಿಸಿದವರೆಗೂ ನೀರು ತುಂಬಿ ಒಳ ಭಾಗದಲ್ಲಿ ಮಣ್ಣು ಕುಸಿತವಾದ ಘಟನೆ ಅಜ್ಜಾವರ ಗ್ರಾಮದ ಮುಳ್ಯ ಅಟ್ಟೂರು ನಿವಾಸಿ ಆನಂದ ಎಂಬವರ ಮನೆಯಂಗಳದಲ್ಲಿ ನಡೆದಿದೆ. ಪಂಚಾಯತ್ ಅಭಿವೃದ್ಧಿ ಅಧಿಕಾರಿ ಜಯಮಾಲ ಭೇಟಿ ಮಾಡಿ ದೃಶ್ಯ ಪರಿಶೀಲನೆ ಮಾಡಿದರು.ಮನೆಯ ಅಂಗಳದಲ್ಲಿ ಬಾವಿ ಇರುವುದರಿಂದ ಮಣ್ಣು ಕುಸಿತ ಜಾಸ್ತಿಯಾದಲ್ಲಿ ಮನೆಗೆ ಹಾನಿ ಸಂಭವಿಸಬಹುದೆಂದು ಮನೆಯವರಿಗೆ ಭಯ ಉಂಟಾಗಿದೆ.

ಸ್ಥಳಕ್ಕೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳ ಭೇಟಿ; ಈ ಪ್ರಕರಣ ಬೆಳಕಿಗೆ ಬರುತ್ತಿದ್ದಂತೆ ಪಂಚಾಯತ್ ಅಭಿವೃದ್ಧಿ ಅಧಿಕಾರಿಗಳು ಮತ್ತು ಗ್ರಾಮ ಆಡಳಿತಾಧಿಕಾರಿ ತಿಪ್ಪೇಸ್ವಾಮಿ ಮತ್ತು ಗ್ರಾಮ ಸಹಾಯಕ ಶಿವಣ್ಣ ಭೇಟಿ ನೀಡಿ ಸ್ಥಳ ಪರಿಶೀಲನೆ ನಡೆಸಿರುವುದಾಗಿ ತಿಳಿದುಬಂದಿದೆ.

ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿ ಅಡ್ಕಾರ್ ಬೂತ್ ಭೇಟಿ

ಅಡ್ಕಾರ್ ಬೂತ್ ಸಂಖ್ಯೆ 185 ಕ್ಕೆ ಜಿಲ್ಲಾ ಪೋಲಿಸ್ ವರಿಷ್ಠಾಧಿಕಾರಿಗಳು ಭೇಟಿ ನೀಡಿ ಮತದಾರರನ್ನು ಮತ್ತು ಸಮಗ್ರವಾಗಿ ಚುನಾವಣೆ ನಡೆಯುತ್ತಿರುವ ಬಗ್ಗೆ ವೀಕ್ಷಣೆ ನಡೆಸಿದರು.

ಮೊಗ್ರ : ಮತಯಂತ್ರ ಕೈಕೊಟ್ಟಿದ್ದರಿಂದ ಮತದಾನ ವಿಳಂಬ

ಗುತ್ತಿಗಾರು ಗ್ರಾಮದ ಮೊಗ್ರ ಬೂತ್‌ನಲ್ಲಿ ಮತಯಂತ್ರ ಕೈಕೊಟ್ಟಿದ್ದ-ರಿಂದ ಅರ್ಧ ಗಂಟೆ ವಿಳಂಬವಾಗಿ ಮತದಾನ ನಡೆದ ಘಟನೆ ವರದಿಯಾಗಿದೆ.

ಬೊಳುಬೈಲು: ಕಾರು-ಬೈಕ್ ಡಿಕ್ಕಿ, ಸಹಸವಾರ ಗಂಭೀರ ಮಂಗಳೂರಿನಲ್ಲಿ ಚಿಕಿತ್ಸೆ

ಬೊಳುಬೈಲಿನಲ್ಲಿ ಕಾರು ಮತ್ತು ಬೈಕ್ ಮಧ್ಯೆ ಅಪಘಾತ ಸಂಭವಿಸಿ ಬೈಕ್ ಸವಾರರಾದ ದಂಪತಿಗಳಿಗೆ ಗಂಭೀರ, ಹಾಗೂ ಕಾರಿನಲ್ಲಿದ್ದ ಓರ್ವ ಮಹಿಳೆಗೆ ಗಾಯಗಳಾದ ಘಟನೆ ಎ.29ರಂದು ನಡೆಯಿತು. ಬೈಕ್ ಸವಾರ ಗಾಯಾಳು ಗುರುಪ್ರಸಾದ್ ಹಾಗೂ ಅವನ ಪತ್ನಿ ಶಶಿಕಲಾ ಎಂದು ಗುರುತಿಸಲಾಗಿದೆ.

ಬೈಕಿನಲ್ಲಿದ್ದ ದಂಪತಿಗಳು ಮೂಲತಃ ಬಂಟ್ವಾಳದವರಾಗಿದ್ದು ಮೇನಾಲದಲ್ಲಿ ನಡೆದ ಕುಟುಂಬವೊಂದರ ಮದುವೆಯ ಡಿನ್ನರ್ ಕಾರ್ಯಕ್ರಮಕ್ಕೆ ಸುಳ್ಯಕ್ಕೆ ಬಂದಿದ್ದರು ಎಂದು ತಿಳಿದು ಬಂದಿದೆ. ಕಾರ್ಯಕ್ರಮ ಮುಗಿಸಿ ಸಂಜೆ ಬಂಟ್ವಾಳ ಕಡೆ ಹೋಗುತ್ತಿದ್ದ ಸಂದರ್ಭ ಧರ್ಮಸ್ಥಳ ಮೂಲದ ಕಾರು ಮುಖಮುಖಿ ಡಿಕ್ಕಿಯಾಗಿ ಘಟನೆ ಸಂಭವಿಸಿದೆ. ಘಟನೆಯಿಂದ ಬೈಕಿನಲ್ಲಿದ್ದ ಗುರುಪ್ರಸಾದ್ ರವರ ತಲೆಗೆ ತೀವ್ರ ಗಾಯವಾಗಿದ್ದು ಅವರ ಪತ್ನಿ ಶಶಿಕಲಾ ಎಂಬುವರಿಗೂ ತೀವ್ರ ಗಾಯವಾಗಿದೆ. ಶಶಿಕಲಾರಿಗೆ ಗಂಬೀರ ಗಾಯಗಳಾಗಿರುವ ಹಿನ್ನಲೆಯಲ್ಲಿ ಮಂಗಳೂರಿಗೆ ವರ್ಗಾವಣೆ ಮಾಡಲಾಗಿದೆ ಎಂದು ತಿಳಿದುಬಂದಿದೆ. ಕಾರಿನಲ್ಲಿ ಐವರು ಇದ್ದು ಮುಂಭಾಗದಲ್ಲಿ ಕುಳಿತಿದ್ದ ವಿಜಯಲಕ್ಷ್ಮೀರವರಿಗೂ ರಕ್ತ ಗಾಯವಾಗಿದ್ದು ಅವರನ್ನು ಸುಳ್ಯ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯಲು ದಾಖಲಿಸಲಾಗಿದೆ. ಈ ಬಗ್ಗೆ ಸುಳ್ಯ ಪೊಲೀಸ್ ಠಾಣೆಯಲ್ಲಿ ಅ.ಕ್ರ. 192/16 ಕಲಂ:279, 337 ರಂತೆ ಪ್ರಕರಣೆ ದಾಖಲಾಗಿದೆ.

ಹೃದಯಾಘಾತವಾಗಿ ಕೇಶವ ಗೌಡ ಹುದೇರಿ ನಿಧನ

ಮುರುಳ್ಯ ಗ್ರಾಮದ ಹುದೇರಿ ದಿ.ಸಂಕಪ್ಪ ಗೌಡರ ಪುತ್ರ ಕೇಶವರವರು ಹೃದಯಾಘಾತದಿಂದ ಎ.29 ರಂದು ಮುಂಬೈಯಲ್ಲಿ ನಿಧನರಾದರು. ಇವರು ಮುಂಬೈಯ ಖಾಸಗಿ ಕಂಪೆನಿಯಲ್ಲಿ ಕೆಲಸ ನಿರ್ವಹಿಸುತ್ತಿದ್ದರು.

ಮೃತರು ಪತ್ನಿ ತಾರಾ, ಇಬ್ಬರು ಪುತ್ರಿಯರು, ಇಬ್ಬರು ಸಹೋದರರು, ಸಹೋದರಿಯರನ್ನು ಹಾಗೂ ಕುಟುಂಬಸ್ಥರನ್ನು ಅಗಲಿದ್ದಾರೆ.

ಮೃತದೇಹವು ಮುಂಬೈಯಿಂದ ಊರಿಗೆ ತಲುಪಿದ್ದು, ಅಂತ್ಯಸಂಸ್ಕಾರ ಮಾಡಲಾಯಿತು.

ಅಪಘಾತ ಗೂನಡ್ಕ: ಚಲಿಸುತ್ತಿದ್ದ ಸ್ಕೂಟರ್‌ನ ಟಯರ್ ಬ್ಲಾಸ್ಟ್, ಸ್ಕೂಟರ್ ಪಲ್ಟಿ, ಸವಾರನಿಗೆ ಗಾಯ

ಚಲಿಸುತ್ತಿದ್ದ ಸ್ಕೂಟರ್ ನ ಟಯರ್ ಸಿಡಿದು ಸವಾರ ರಸ್ತೆಗೆ ಬಿದ್ದು ಗಾಯಗೊಂಡ ಘಟನೆ ಎ. 29 ಸಂಜೆ ಮಾಣಿ ಮೈಸೂರು ಹೆದ್ದಾರಿ ದೊಡ್ಡಡ್ಕ ಗಲ್ಫ್ ಹೋಟೆಲ್ ಬಳಿ ಸಂಭವಿಸಿದೆ.

ಮೂಲತಃ ಕೊಡಗಿನ ಕೊಟ್ಟಮುಡಿ ಭಾಗದ ಹಸ್ಸೈನಾರ್ ಎಂಬುವವರು ಸುಳ್ಯದಿಂದ ಕೊಟ್ಟಮುಡಿಗೆ ತಮ್ಮ ಸ್ಕೂಟಿಯಲ್ಲಿ ಎ. 29 ಸಂಜೆ ಹೋಗುತ್ತಿದ್ದ ಸಂದರ್ಭ ಏಕಾಏಕಿ ಟೈಯರ್ ಸಿಡಿದು ಅವರು ರಸ್ತೆಗೆ ಬಿದ್ದಿದ್ದಾರೆ.

ಈ ವೇಳೆ ಅವರ ತಲೆಗೆ ಗಾಯವಾಗಿದ್ದು ಕೂಡಲೆ ಸ್ಥಳೀಯ ನಿವಾಸಿ ಗಲ್ಫ್ ಹೋಟೆಲ್ ಮಾಲಕ ಹಸ್ಸೈನ್ ಎನ್ನುವವರು ತಮ್ಮ ಕಾರಿನಲ್ಲಿ ಕೆವಿಜಿ ಆಸ್ಪತ್ರೆಗೆ ತಂದು ದಾಖಲಿಸಿದ್ದಾರೆ.

ಅರಂತೋಡು: ಅಣ್ಣನ ಸಾವಿನ ವಿಚಾರ ತಿಳಿದು ತಮ್ಮ ಕುಸಿದು ಬಿದ್ದು ಸಾವು, ಸಾವಿನಲ್ಲು ಜತೆಯಾದ ಸಹೋದರರು

ಅಣ್ಣ ನಿಧನರಾದ ವಿಷಯ ತಿಳಿದು ತಮ್ಮನು ಕುಸಿದು ಬಿದ್ದು ಮೃತಪಟ್ಟ ಧಾರುಣ ಘಟನೆ ಎ.30ರಂದು ನಡೆದಿದೆ.

ಅರಂತೋಡು ಗ್ರಾಮದ ನಿವಾಸಿ ಅಬ್ದುಲ್ಲರವರು (82)ರವರು ಅಸೌಖ್ಯದಿಂದ ಮುಂಜಾನೆ ನಿಧನರಾದರು. ಈ ವಿಷಯ ತಿಳಿಯುತಿದ್ದಂತೆ ಸಹೋದರ ಉದಯನಗರದ ನಿವಾಸಿ ಮಹಮ್ಮದ್ (76) ಅವರು ಮನೆಯಲ್ಲಿ ಕುಸಿದುಬಿದ್ದರು.

ಮನೆಯವರು ತಕ್ಷಣ ಮಹಮ್ಮದ್ ರನ್ನು ಸುಳ್ಯ ಆಸ್ಪತ್ರೆಗೆ ಕರೆದುಕೊಂಡು ಬಂದರಾದರೂ ಆ ವೇಳೆಗೆ ಮಹಮ್ಮದ್ ರವರು ಮೃತಪಟ್ಟರೆಂದು ತಿಳಿದುಬಂದಿದ್ದು ಈ ಮೂಲಕ ಸಹೋದರರು ಈರ್ವರು ಕೂಡ ಜೊತೆಯಾಗಿ ಇಹಲೋಕ ತ್ಯಜಿಸಿದರು.

ಮರ ಕಡಿಯುವಾಗ ಕೇರ್ಪಳ ವ್ಯಕ್ತಿ ಕೊಂಬೆಯ ನಡುವೆ ಸಿಲುಕಿ ವ್ಯಕ್ತಿ ಸಾವು

ಸುಳ್ಯದ ಕುರುಂಜಿ ಗುಡ್ಡೆಯಲ್ಲಿ ವ್ಯಕ್ತಿಯೋರ್ವರು ಮರ ಕಡಿಯುವ ಸಂದರ್ಭದಲ್ಲಿ ಮರದ ಕೊಂಬೆಯ ನಡುವೆ ಸಿಲುಕಿ ಗಂಭೀರವಾಗಿ ಗಾಯಗೊಂಡು ಆಸ್ಪತ್ರೆಗೆ ತಲುಪಿದ ಸಂದರ್ಭದಲ್ಲಿ ಮೃತಪಟ್ಟ ಘಟನೆ ಇದೀಗ ವರದಿಯಾಗಿದೆ . ಮೃತ ವ್ಯಕ್ತಿಯನ್ನು ಚಿನ್ನಪ್ಪ ನಾಯ್ಕ್ ಕೇರ್ಪಳ್ಳ ಮನೆ ಎಂದು ತಿಳಿದು ಬಂದಿದ್ದು ಗಂಭೀರವಾಗಿ ಗಾಯಗೊಂಡ ವಿಚಾರ ತಿಳಿಯುತ್ತಿದ್ದಂತೆ ಅಚ್ಚು ಪ್ರಗತಿ ತೆರಳಿ ಅವರನ್ನು ಆಸ್ಪತ್ರೆಗೆ ಸಾಗೊಸುವ ಕೆಲಸ ಮಾಡಿದ್ದರು ಎಂದು ತಿಳಿದು ಬಂದಿದ್ದು ಇದೀಗ ಮೃತ ದೇಹ ಸರಕಾರಿ ಆಸ್ಪತ್ರೆಯಲ್ಲಿ ಇರಿಸಲಾಗಿದೆ ಎಂದು ತಿಳಿದು ಬಂದಿದೆ.

ಬಸವನಪಾದೆ ಬಳಿಯಲ್ಲಿ ಬೈಕ್ ಸ್ಕಿಡ್ ಆಗಿ ಮಹಿಳೆ ಗಾಯ

ಸುಳ್ಯ ಅಜ್ಜಾವರ ಗ್ರಾಮದ ಬಸವನಪಾದೆ ಎಂಬಲ್ಲಿ ಮನೋಹರ್ ಮತ್ತು ತಮ್ಮ ಪತ್ನಿ ಸಹಿತ ಮನೆಗೆ ತೆರಳುವ ಸಂದರ್ಭದಲ್ಲಿ ಬೈಕ್ ಸ್ಕಿಡ್ ಆಗಿ ಕಾಲಿಗೆ ಗಂಭೀರ ಗಾಯಗಳಾಗಿದೆ. ಈ ಹಿಂದಿನಿಂದಲೂ ರಸ್ತೆ ಕಾಮಗಾರಿ ಪೂರ್ಣ ಗೊಳಿಸಲು ಆಗ್ರಹಿಸುತಿದ್ದರೂ ಇಲಾಖೆಗಳು ಮಾತ್ರ ಯಾವುದೇ ರೀತಿಯಲ್ಲಿ ಕ್ರಮ ಜರುಗಿಸದೇ ಅಪಾಯಗಳು ಆಹ್ವಾನಿಸುತ್ತಿದೆ ಎಂದು ಜನತೆ ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಕೆ ಎಫ್ ಡಿ ಸಿ ಕ್ವಾಟರ್ಸ್ ನಲ್ಲಿ ಮನೆಯ ಬಾಗಿಲು ಮುರಿದು ನಗ ನಾಣ್ಯ ಕಳ್ಳತನ , ಪ್ರಕರಣ ದಾಖಲು

ಸುಳ್ಯ : ಸುಳ್ಯ ಕೆ ಎಫ್ ಡಿ ಸಿ ಕ್ವಾಟರ್ಸ್ ನಲ್ಲಿ ಮನೆಯಲ್ಲಿ ಇರಿಸಿದ್ದ ನಗ ನಾಣ್ಯವನ್ನು ಮನೆಯ ಬಾಗಿಲು ಮುರಿದು ಕಳ್ಳರು ಕದ್ದೋಯ್ದ ಘಟನೆ ವರದಿಯಾಗಿದೆ.

ನಾಚಪ್ಪ.ಎ.ಸಿ ಎಂಬುವವರು ಕೆ. ಎಫ್.ಡಿ.ಸಿ ಕ್ವಾಟ್ರಸ್, ವಾಸ್ತವ್ಯವಿದ್ದು ಇವರು ಎ.29ರಂದು ಸಮಯ ಸುಮಾರು 09:00 ಗಂಟೆಗೆ ನಾಚಪ್ಪರು ಮತ್ತು ಅವರ ಪತ್ನಿ ಮನೆಗೆ ಬೀಗ ಹಾಕಿ ಕೆಲಸಕ್ಕೆ ಹೋಗಿದ್ದು ಇವರು ತಮ್ಮ ಕೆಲಸ ಮುಗಿಸಿ ಮಧ್ಯಾಹ್ನ ದ ವೇಳೆಗೆ ಮನೆಗೆ ಬಂದು ಒಳಗಡೆ ಹೋದಾಗ ಮನೆಯ ಹಿಂಬದಿಯ ಬಾಗಿಲಿನ ಕೆಳಬದಿಯನ್ನು ಯಾರೋ ಮುರಿದಿರುವುದನ್ನು ಕಂಡು ಬಂದಿದ್ದು, ಗಾಬರಿಗೊಂಡ ಮಹಿಳೆಯು ಮನೆಯ ಬೆಡ್ ರೂಮ್ ಗೆ ಹೋಗಿ ನೋಡಿದಾಗ ಬೆಡ್ ರೂಮ್ ನಲ್ಲಿದ್ದ ಕಪಾಟಿನ ಬಾಗಿಲನ್ನು ತೆರೆದಿದ್ದು, ಕರಡಿಕೆಯಲ್ಲಿ ಇಟ್ಟಿದ್ದ 2 ಗ್ರಾಂ ತೂಕದ ಹಳೆಯ ಬೆಂಡೋಲೆ,1 ಜೊತೆ, ತಲಾ 2 ಗ್ರಾಂ ತೂಕದ ಹಳೆಯ ಚಿನ್ನದ ಉಂಗುರ -2, 8 ಗ್ರಾಂ ತೂಕದ ಹಳೆಯ ಚಿನ್ನದ ತಾಳಿ ಚೈನು -1 , 2 ಗ್ರಾಂ ತೂಕದ ಹಳೆಯ ಚಿನ್ನದ ಸರ -1, ಹಾಗೂ ಅಲ್ಲೇ ಇಟ್ಟಿದ 30000/- ರೂ ನಗದು ಹಣವನ್ನು ಯಾರೋ ಕಳ್ಳರು ಕಳವು ಮಾಡಿಕೊಂಡು ಹೋಗಿರುತ್ತಾರೆ, ಒಟ್ಟು ಚಿನ್ನವು 16 ಗ್ರಾಂ ಇದ್ದು,

ಅದರ ಅಂದಾಜು ಮೌಲ್ಯ 64000/- ರೂ ಆಗಿರುತ್ತದೆ. ನಗದು ಸೇರಿ ಒಟ್ಟು 94000/- ರಷ್ಟು ಆಗಬಹುದು.

ಈ ಬಗ್ಗೆ ಸುಳ್ಯ ಪೊಲೀಸ್ ಠಾಣಾ ಅ.ಕ್ರ 69/2024 ಕಲಂ: 454.380 ಐಪಿಸಿ ಪ್ರಕರಣದಂತೆ ದಾಖಲಾಗಿದ್ದು ತನಿಖೆ ಮುಂದುವರೆಸಲಾಗಿದೆ.

ಜೋಡುಪಾಲ : ಪ್ರಪಾತಕ್ಕುರುಳಿದ ಲಾರಿ - ಚಾಲಕ ಅಪಾಯದಿಂದ ಪಾರು

ಎಮ್ಮೆಮಾಡಿನಿಂದ ಮಂಗಳೂರು ಕಡೆಗೆ ಜ್ಯೂಸ್ ಸಾಗಾಟ ಮಾಡುತ್ತಿದ್ದ ಲಾರಿ ಜೋಡುಪಾಲ ಬಳಿ ಚಾಲಕನ ನಿಯಂತ್ರಣ ತಪ್ಪಿ ಪ್ರಪಾತಕ್ಕೆ ಉರುಳಿದ ಘಟನೆ ಮುಂಜಾನೆ ನಡೆದಿದೆ. ಚಾಲಕ ಅಪಾಯದಿಂದ ಪಾರಾಗಿದ್ದಾರೆ ಎಂದು ತಿಳಿದುಬಂದಿದೆ.

ಜಾನಕಿ ಅಂಬೆಕಲ್ಲು ನಿಧನ

ದೇವಚಳ್ಳ ಗ್ರಾಮದ ಅಂಬೆಕಲ್ಲು ಮನೆತನದ ವಿಷ್ಣುಗೌಡ ಇವರ ಧರ್ಮಪತ್ನಿ ಜಾನಕಿ(72) ಎ.29ರಂದು ಕಡಿಮೆ ರಕ್ತದೊತ್ತಡ ಸಂಭವಿಸಿ ನಿಧನರಾದರು. ಮೃತರು ಪುತ್ರರಾದ ಬಾಲಚಂದ್ರ, ಜಗದೀಶ, ಮಧುಸೂಧನ, ಪುತ್ರಿ ಶೈಲಾ ದಿವಾಕರ್ ಹಾಗೂ ಕುಟುಂಬಸ್ಥರು, ಬಂಧುಮಿತ್ರರನ್ನು ಅಗಲಿದ್ದಾರೆ.



ಅಜ್ಜಾವರ: ಬೈಕ್ ಮೇಲೆ ಮಗುಚಿ ಬಿದ್ದ ಜೀಪು; ಬೈಕ್ ಸವಾರ ಸಾವು

ಸುಳ್ಯ ತಾಲೂಕು ಅಜ್ಜಾವರ ಗ್ರಾಮದ ಮಾರ್ಗ ಶಿವರಾಮ ಎಂಬುವವರ ಮನೆಯ ಬಳಿ 12:15ಗಂಟೆಗೆ ಸುಳ್ಯ ಕಡೆಯಿಂದ ಮಂಡಕೋಲು ಕಡೆಗೆ ಜೀಪ್ ಚಾಲಕ ಅಜಾಗರೂಕತೆ ಮತ್ತು ನಿರ್ಲಕ್ಷತನದಿಂದ ಜೀಪನ್ನು ಚಾಲನೆ ಮಾಡಿಕೊಂಡು ವಿನಾಯಕ ಮೂರ್ತಿ (53) ಎಂಬುವವರ ಬೈಕ್‌ಗೆ ಡಿಕ್ಕಿ ಹೊಡೆದು ಗಂಭೀರವಾಗಿ ಗಾಯಗೊಂಡಿದ್ದರು. ಗಾಯಗೊಂಡ ವಿನಾಯಕ ಮೂರ್ತಿರವರನ್ನುವ ಆ್ಯಂಬುಲೇನ್ಸ್ ವೊಂದರಲ್ಲಿ ಸುಳ್ಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಬಂದಿದ್ದು ಈ ವೇಳೆಯಲ್ಲಿ ತಲೆಗೆ ಹಾಗೂ ದೇಹದ ಇತರ ಭಾಗಗಳಿಗೆ ತೀವ್ರ ಸ್ವರೂಪದ ಗಾಯವಾಗಿದ್ದು ಹೆಚ್ಚಿನ ಚಿಕಿತ್ಸೆಯ ಬಗ್ಗೆ ಸುಳ್ಯ ಕೆ.ವಿ.ಜಿ ಆಸ್ಪತ್ರೆಗೆ ಕರೆದುಕೊಂಡು ಹೋದರು. ವೈದ್ಯರು ವಿನಾಯಕ ಮೂರ್ತಿಯರವರನ್ನು ಪರೀಕ್ಷಿಸಿ ಮೃತ ಪಟ್ಟಿರುವುದಾಗಿ ತಿಳಿಸಿದರು. ಹೆಂಡತಿ ಮಂಜುಳ (50) ರವರಿಗೆ ತಲೆಗೆ, ಬೆನ್ನಿಗೆ, ಎಡ ಎದೆಗೆ ರಕ್ತಗಾಯ ಹಾಗು ದೇಹದ ಇತರ ಭಾಗಗಳಿಗೆ ಗುದ್ದಿದ ಗಾಯವಾಗಿದ್ದು ಸುಳ್ಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿ ಹೆಚ್ಚಿನ ಚಿಕಿತ್ಸೆಯ ಬಗ್ಗೆ, ಮಂಗಳೂರಿನ ಎಜೆ ಆಸ್ಪತ್ರೆಗೆ ಕೊಂಡೊಯ್ಯಲಾಗಿದ್ದು ಇದೀಗ ಇಲ್ಲಿ ತೀವ್ರ ನಿಘಾ ಘಟಕದಲ್ಲಿ ಚಿಕಿತ್ಸೆ ಮುಂದುವರೆಸಲಾಗಿದ್ದು ಈ ಕುರಿತಂತೆ ಅಪಘಾತಕ್ಕೆ ಕಾರಣವಾದ ಜೀಪ್ ನಂಬರ್ ಕೆಎ 21 ಪಿ 9090 ಮತ್ತು ಅದರ ಚಾಲಕನ ಹೆಸರು ಮಹಮ್ಮದ್ ಆಲಿ ವಿರುದ್ದ ಸುಳ್ಯ ಪೊಲೀಸ್ ಠಾಣೆಯಲ್ಲಿ ಕ್ರಮ್ ನಂ.0067 /2024, ಎಫ್‌ಐಆರ್ 15/04, ಎಕ್ಟ್ & ಸೆಕ್ಷನ್ ಐಪಿಸಿ 1860 (ಯು/- 279,337,304(ಎ)) ಯಂತೆ ಪ್ರಕರಣೆ ದಾಖಲಾಗಿದೆ.

ವರದಿ, ಕಥೆ, ಜಾಹೀರಾತು, ಕವನ ಲೇಖನಗಳನ್ನು ಕಳುಹಿಸಿಕೊಡಿ
WWW.amarasuddi@gmail.com

ದೊಡ್ಡಡ್ಕ: ಕಾರು- ಬೈಕ್ ಡಿಕ್ಕಿ, ಬೈಕ್ ಸಹಸವಾರ ಮೃತ್ಯು

ಸಂಪಾಜೆ ಗ್ರಾಮದ ಗೂನಡ್ಕ ಎಂಬಲ್ಲಿ ಬೈಕ್ ಮತ್ತು ಕಾರು ಪರಸ್ಪರ ಡಿಕ್ಕಿ ಹೊಡೆದು ಬೈಕ್ ನಲ್ಲಿ ಇದ್ದ ಸಹಸವಾರನಾಗಿದ್ದ ದರ್ಶನ್ ಮೃತಪಟ್ಟ ಘಟನೆ ಎ.25ರಂದು ನಡೆದಿದೆ.

ದರ್ಶನ್ ಹಾಗೂ ಅವಿನ್ ರವರು ಎ.25ರಂದು (ಕೆಎ 21 ಇಡಿ 0884) ಬೈಕ್ ನಲ್ಲಿ ಮಡಿಕೇರಿಯಿಂದ ಅರಂತೋಡಿಗೆ ಬರುತ್ತಿರುವಾಗ (ಮಾಣಿ-ಮೈಸೂರು ಹೆದ್ದಾರಿ) ಸಮಯ ಸುಮಾರು 11.45 ಗಂಟೆಗೆ ತಲುಪುತ್ತಿದ್ದಂತೆ, ಸುಳ್ಯ ಕಡೆಯಿಂದ ಮಡಿಕೇರಿ ಕಡೆಗೆ ಕಾರೊಂದರ (ಕೆಎ 27 ಎಂಎ 1818) ಚಾಲಕ ಅಜಾಗರೂಕತೆ ಮತ್ತು ನಿರ್ಲಕ್ಷತನದಿಂದ ತೀರ ಬಲಬದಿಗೆ ಕಾರನ್ನು ಚಾಲನೆ ,ಮಾಡಿ ಬೈಕ್ ಗೆ ಡಿಕ್ಕಿ ಹೊಡೆದ ಪರಿಣಾಮ, ದರ್ಶನ್ ಹಾಗೂ ಅವಿನ್ ಬೈಕ್ ಸಮೇತ ರಸ್ತೆಗೆ ಎಸೆಯಲ್ಪಟ್ಟು ಗಾಯಗೊಂಡಿದ್ದವರನ್ನು ಸ್ಥಳೀಯರು ಉಪಚರಿಸಿ ಸುಳ್ಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋಗಿದ್ದು, ಪ್ರಥಮ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಯ ಬಗ್ಗೆ ಸುಳ್ಯ ಕೆವಿಜಿ ಆಸ್ಪತ್ರೆಗೆ ಕರೆದುಕೊಂಡು ಹೋದಾಗ ಅಲ್ಲಿನ ವೈದ್ಯರು ಪರೀಕ್ಷಿಸಿ ಗಾಯಾಳುಗಳನ್ನು ಮಂಗಳೂರಿಗೆ ಕರೆದುಕೊಂಡು ಹೋಗುವಂತೆ ತಿಳಿಸಿದ್ದು, ದರ್ಶನ್ ನನ್ನು ಮಂಗಳೂರಿನ ಫಸ್ಟ್ ನ್ಯೂರೋ ಆಸ್ಪತ್ರೆಯಲ್ಲಿ ಹಾಗೂ ಅವಿನ್ ನನ್ನು ಮಂಗಳೂರಿನ ತೇಜಸ್ವಿನಿ ಆಸ್ಪತ್ರೆಯಲ್ಲಿ ಒಳರೋಗಿಯಾಗಿ ದಾಖಲಿಸಿದ್ದರು. ಎ .26ರಂದು ದರ್ಶನ್ ಚಿಕಿತ್ಸೆ ಫಲಕಾ-ರಿಯಾಗದೇ ಮೃತಪಟ್ಟಿದ್ದರು. ಈ ಅಪಘಾತದಿಂದ ದರ್ಶನ್ ತಲೆಗೆ, ಕಾಲಿಗೆ, ತೀವ್ರ ಸ್ವರೂಪದ ರಕ್ತಗಾಯವಾಗಿದ್ದು, ಅವಿನ್ ಗೆ ಬಲಕೈಗೆ ಹಾಗೂ ದೇಹದ ಇತರ ಭಾಗಗಳಲ್ಲಿ ಗಾಯವಾಗಿರುತ್ತದೆ. ಅಪಘಾತವುಂಟು ಮಾಡಿದ ಕಾರು ಚಾಲಕ ವಿಷ್ಣು ಅಪಘಾತದಿಂದ ಗಾಯವಾಗಿದ್ದು, ಸುಳ್ಯ ಕೆವಿಜಿ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದಾರೆ. ಈ ಬಗ್ಗೆ ಸುಳ್ಯ ಪೊಲೀಸ್ ಠಾಣಾ ಅ.ಕ್ರ ನಂ: 68/2024 ಕಲಂ:279 337,304(ಂ) ಐಪಿಸಿ ಯಂತೆ ಪ್ರಕರಣ ದಾಖಲಾಗಿರುತ್ತದೆ.

ಬೊಳುಬೈಲು : ಚುನಾವಣಾ ಸಿಬ್ಬಂದಿಯಿಂದ ಪಕ್ಷದೊಂದರ ಪರ ಮತ ಹಾಕಲು ಸೂಚನೆ ಆರೋಪ - ದೂರು ದಾಖಲು - ಸಿಬ್ಬಂದಿಯನ್ನು ಹೊರಹಾಕಿದ ಪೋಲೀಸರು

ಬೊಳುಬೈಲು ಮತದಾನ ಕೇಂದ್ರದಲ್ಲಿ ಕರ್ತವ್ಯ ನಿರತ ಸಂಜೀವಿನಿ ಒಕ್ಕೂಟದ ಸದಸ್ಯೆ ಹಾಗೂ ಸ್ಥಳೀಯ ಗ್ರಾ.ಪಂ. ಸದಸ್ಯರೊರ್ವರ ಮಧ್ಯೆ ಪರಸ್ಪರ ಮಾತಿನ ಚಕಮಕಿ ನಡೆದು, ಸ್ಥಳಕ್ಕೆ ಪೊಲೀಸರು ಆಗಮಿಸಿ, ಸಂಜೀವಿನಿ ಒಕ್ಕೂಟದ ಮಹಿಳೆಯನ್ನು ಮತದಾನ ಕೇಂದ್ರದಿಂದ ಹೊರಗೆ ಕಳುಹಿಸಿದ ಘಟನೆ ನಡೆದಿದೆ.

ಜಾಲ್ಸೂರು ಗ್ರಾಮ ಪಂಚಾಯತಿಯ ಶ್ರೀ ಸುಬ್ರಹ್ಮಣ್ಯ ಸಂಜೀವಿನಿ ಒಕ್ಕೂಟದ ಅ

ಕುಕ್ಕೆ ಸುಬ್ರಹ್ಮಣ್ಯನ ಕೃಪಾಶೀರ್ವಾದ ವಿದ್ಯಾಸಂಪತ್ತಿನ ಔನತ್ಯಕ್ಕೆ ಅಡಿಗಲ್ಲು – ರಾಜ್ಯಕ್ಕೆ 5ನೇ ಸ್ಥಾನ ಪಡೆದ ದುರ್ಗಾಲಕ್ಷ್ಮೀ ಅವರನ್ನು ಸನ್ಮಾನಿಸಿ ಮಾತನಾಡಿದ ಸೋಮಶೇಖರ ನಾಯಕ್



ಮಹತೋಭಾರ ಕುಕ್ಕೆಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ಆಡಳಿತದ ವಿದ್ಯಾಸಂಸ್ಥೆಯಲ್ಲಿ ಅಧ್ಯಾಯನ ಮಾಡಿ ರಾಜ್ಯಕ್ಕೆ 5ನೇ ಸ್ಥಾನ ಪಡೆದಿರುವುದು ಶ್ಲಾಘನೀಯ. 5 ದಶಕಗಳಿಗೂ ಅಧಿಕ ಸಮಯದಿಂದ ಅಸಂಖ್ಯಾತ ವಿದ್ಯಾರ್ಥಿಗಳ ಭವಿಷ್ಯ ರೂಪಿಸಿದ ಶ್ರೀ ದೇವಳದ ವಿದ್ಯಾಸಂಸ್ಥೆಯಲ್ಲಿ ಅಧ್ಯಾಯನ ಮಾಡುವುದು ಭಾಗ್ಯ. ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇವರ ಕೃಪಾಶೀರ್ವಾದವೇ ವಿದ್ಯಾಸಂಪತ್ತಿನ ಔನತ್ಯಕ್ಕೆ ಅಡಿಗಲ್ಲು. ದೇವರ ಸಂಸ್ಥೆಯಲ್ಲಿ ಶ್ರೀದೇವರ ಪ್ರಸಾದ ರೂಪಿಯಾಗಿ ಪಡೆದ ವಿದ್ಯೆಯಿಂದ ಭವಿಷ್ಯ ಪಾವನವಾಗುವುದರಲ್ಲಿ ಸಂಶಯವಿಲ್ಲ. ಗ್ರಾಮೀಣ ಭಾಗದ ವಿದ್ಯಾರ್ಥಿನಿಯು ಯಾವುದೇ ಹೆಚ್ಚುವರಿ ಕೋಚಿಂಗ್ ಇತ್ಯಾದಿ ಪಡೆಯದೆ ತರಗತಿಯ ಪಾಠ ಪ್ರವಚನವನ್ನು ಆಲಿಸಿ ಅಧಿಕ ಅಂಕ ಪಡೆದಿರುವುದು ವಿದ್ಯಾಸಂಸ್ಥೆಗೆ ಹೆಮ್ಮೆ ತಂದಿದೆ ಎಂದು ಎಸ್‌ಎಸ್‌ಪಿಯು ಕಾಲೇಜಿನ ಪ್ರಾಚಾರ್ಯ ಸೋಮಶೇಖರ ನಾಯಕ್ ಹೇಳಿದರು.

ರಾಜ್ಯಕ್ಕೆ 5ನೇ ಸ್ಥಾನ ಪಡೆದ ಮಹತೋಭಾರ ಕುಕ್ಕೆ ಶ್ರೀ ಸುಬ್ರಹ್ಮಣ್ಯ ದೇಸ್ಥಾನದ ಆಡಳಿತದ ಎಸ್‌ಎಸ್‌ಪಿಯು ಕಾಲೇಜಿನ ವಿದ್ಯಾರ್ಥಿನಿ ದುರ್ಗಾಲಕ್ಷ್ಮೀ ಜಿ.ಸಿ ಅವರನ್ನು ಸನ್ಮಾನಿಸಿ ಸೋಮವಾರ ಅವರು ಮಾತನಾಡಿದರು. ಆಧುನಿಕ ಯುಗದಲ್ಲಿ ವಿದ್ಯೆ ಅತ್ಯಂತ ಆವಶ್ಯಕ. ಹೆಚ್ಚಿನ ಅಂಕಗಳು ಭವಿಷ್ಯದಲ್ಲಿ ಉನ್ನತ ಸ್ಥಾನಕ್ಕೆ ತೆರಳಲು ಬುನಾದಿಯಾಗುತ್ತದೆ. ಆದುದರಿಂದ ಕಠಿಣ ಪರಿಶ್ರಮದ ಅಧ್ಯಾಯನ ಅತ್ಯಗತ್ಯ. ನಿಷ್ಠೆ ಮತ್ತು ಶಿಸ್ತಿನ ಮೂಲಕ ಪಾಠ ಪ್ರವಚನದ ಕಡೆಗೆ ಮನಸು ನೀಡಿದರೆ ಉತ್ತಮ ಸಾಧನೆ ಮೆರೆಯಲು ಸಾಧ್ಯ ಎಂದರು.

ಗೌರವಾರ್ಪಣೆ: ಕಾರ್ಯಕ್ರಮದಲ್ಲಿ ಪ್ರಾಚಾರ್ಯರು 600ರಲ್ಲಿ 953 ಅಂಕ ಪಡೆದು ರಾಜ್ಯಕ್ಕೆ 5ನೇ ಸ್ಥಾನ ಪಡೆದ ವಿದ್ಯಾಲಕ್ಷ್ಮೀ ಜಿ.ಸಿ ಅವರನ್ನು ಸನ್ಮಾನಿಸಿ ಗೌರವಿಸಿದರು.ಈ ಸಂದರ್ಭದಲ್ಲಿ ದುರ್ಗಾಲಕ್ಷ್ಮೀ ಅವರ ತಾಯಿ ಸುಶೀಲ.ಜಿ, ಸಹೋದರ ಕಾಲೇಜಿನ ಹಿರಿಯ ವಿದ್ಯಾರ್ಥಿ ಶಿವಪ್ರಸಾದ್ ಜಿ.ಸಿ, ಆಯ್ಕೆ ಶ್ರೇಣಿ ಉಪನ್ಯಾಸಕಿ ರೇಖಾರಾಣಿ ಸೋಮಶೇಖರ್, ಹಿರಿಯ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಲೋಕೇಶ್.ಬಿ.ಎನ್, ಕಾರ್ಯದರ್ಶಿ ರತ್ನಾಕರ.ಎಸ್, ಉಪನ್ಯಾಸಕರಾದ ಜಯಶ್ರೀ.ವಿ.ದಂಬೆಕೋಡಿ, ಜ್ಯೋತಿ.ಪಿ.ರೈ, ಭವ್ಯಶ್ರೀ ಹರೀಶ್ ಕುಲ್ಕುಂದ, ಸುಧಾ, ಸವಿತಾ ಕೈಲಾಸ್, ಶ್ರೀಧರ್ ಪುತ್ರನ್, ಮನೋಜ್ ಕುಮಾರ್ ಬಿ.ಎಸ್, ಸಿಬ್ಬಂದಿಗಳಾದ ಸುನೀತಾ ಕುಲ್ಕುಂದ, ಕೇಶವ ಆರ್ಯ ಪೆರುವಾಜೆ ಉಪಸ್ಥಿತ–ರಿದ್ದರು.

ಮಂಡೆಕೋಲು ಶ್ರೀ ಮಹಾವಿಷ್ಣುಮೂರ್ತಿ ದೇವಸ್ಥಾನ ಬ್ರಹ್ಮಕಲಶೋತ್ಸವ ಧಾರ್ಮಿಕ ಸಭಾ ಕಾರ್ಯಕ್ರಮ

ನಾನೆಂಬ ಅಹಂಕಾರ, ಆಸೆ ಇರುವಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ– ಒಡಿಯೂರು ಶ್ರೀ ಗುರುದೇವಾನಂದ ಮಹಾಸ್ವಾಮೀಜಿ

ನಾನು ಎಂಬ ಅಹಂಭಾವ ಹಾಗೂ ಆಸೆ ಇರುವಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ ಎಂದು ಒಡಿಯೂರು ಶ್ರೀ ಗುರುದೇವದತ್ತ ಸಂಸ್ಥಾನದ ಶ್ರೀ ಗುರುದೇವಾನಂದ ಮಹಾಸ್ವಾಮೀಜಿ ಹೇಳಿದರು.

ಮಂಡೆಕೋಲು ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನದ ಬ್ರಹ್ಮಕಲಶೋತ್ಸವ ಪ್ರಯುಕ್ತ ಸೋಮವಾರ ಆಯೋಜಿಸಲಾದ ಮೂರನೇ ದಿನದ ಧಾರ್ಮಿಕ ಸಭಾ ಕಾರ್ಯಕ್ರಮದಲ್ಲಿ ಆಶೀರ್ವಚನ ನೀಡುತ್ತಾ ಅವರು ಮಾತನಾಡಿದರು. ಸಂಸ್ಕಾರ, ಶಿಸ್ತು, ಸಂಯಮಗಳು ಜೊತೆಗಿದ್ದರೆ ಭವ್ಯ ಬದುಕಿನಲ್ಲಿ ದಿವ್ಯತೆಯ ಅನುಭವವನ್ನು ಸಾಧಿಸಬಹುದು ಎಂದವರು ತಿಳಿಸಿದರು.

ಶ್ರೀಧಾಮ ಮಾಣಿಲ ಕ್ಷೇತ್ರದ ಶ್ರೀ ಮೋಹನದಾಸ ಪರಮಹಂಸ ಸ್ವಾಮೀಜಿ ಆಶೀರ್ವಚನ ನೀಡುತ್ತಾ, ದೇವಸ್ಥಾನ ದೇವರಿಗಲ್ಲ. ದುಷ್ಟತ್ಯಗಳ ನಿರ್ಮೂಲನೆಗಾಗಿ, ಸತ್ಕರ್ಮಗಳ ಆಚರಣೆಗಾಗಿ ದುಃಖಿತ ಸಮಾಜದ ಉದ್ಧಾರಕ್ಕಾಗಿ ದೇವಸ್ಥಾನ ಧಾರ್ಮಿಕ ಶ್ರದ್ಧಾ ಕೇಂದ್ರಗಳ ಅವಶ್ಯಕತೆಯಿದೆ ಎಂದರು.

ಧಾರ್ಮಿಕ ಉಪನ್ಯಾಸ ನೀಡಿದ ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಅಖಿಲ ಭಾರತ ಮಟ್ಟದ ಆಹ್ವಾನಿತ ಖಾಯಂ ಸದಸ್ಯ ಕಜಂಪಾಡಿ ಸುಬ್ರಹ್ಮಣ್ಯ ಭಟ್, ಸಂಸ್ಕಾರ ಕೊಡುವ ನಾಲ್ಕು ಕೇಂದ್ರಗಳಾದ ದೇವಸ್ಥಾನ, ಮನೆ, ಶಾಲೆ ಹಾಗೂ ಸಮಾಜದಿಂದ ಹೊರ ಬರುವ ಉತ್ತಮ ವಿಚಾರಗಳನ್ನು ಬದುಕಿನಲ್ಲಿ ಅಳವಡಿಸಿಕೊಳ್ಳುವ ಅನಿವಾರ್ಯತೆ ಇದೆ ಎಂದರು. ಮೇನಾಲದ ಶ್ರೀ ಕಾಳಿಕಾ ದುರ್ಗಾಪರಮೇಶ್ವರಿ ಕ್ಷೇತ್ರದ ಶ್ರೀ ಪದ್ಮನಾಭ ಸ್ವಾಮೀಜಿ ದೀಪ ಬೆಳಗಿಸಿ ಕಾರ್ಯಕ್ರಮವನ್ನು ದೀಪ ಬೆಳಗಿಸಿ ಉದ್ಘಾಟಿಸಿದರು. ದೇಗುಲದ ಜೀರ್ಣೋದ್ಧಾರ ಸಮಿತಿಯ ಅಧ್ಯಕ್ಷ ಸದಾನಂದ ಮಾವಜಿ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ್ದರು. ವಿಧಾನ ಪರಿಷತ್ ಮಾಜಿ ಸದಸ್ಯ ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಮಾಜಿ ಜಿ. ಪಂ ಸದಸ್ಯ, ಸರಕಾರದ ಪಂಚ ಗ್ಯಾರಂಟಿ ಅನುಷ್ಠಾನ ಪ್ರಾಧಿಕಾರದ ಜಿಲ್ಲಾಧ್ಯಕ್ಷ ಭರತ್ ಮುಂಡೋಡಿ, ಜಿ.ಪಂ ಮಾಜಿ ಸದಸ್ಯೆ ಪುಷ್ಪಾವತಿ ಬಾಳಿಲ, ಜಿಲ್ಲಾ ಧಾರ್ಮಿಕ ಪರಿಷತ್ ನ ಮಾಜಿ ಸದಸ್ಯೆ ವಿಮಲಾ ರಂಗಯ್ಯ, ಸುಬ್ರಹ್ಮಣ್ಯ ದೇಗುಲದ ಮಾಜಿ ಟ್ರಸ್ಟಿ ರಾಜೀವಿ ರೈ, ಅಡ್ಕಾರು ಶ್ರೀ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿಯ ಅಧ್ಯಕ್ಷ ಜಯರಾಮ ರೈ, ನ್ಯಾಯವಾದಿ ಎಂ. ವೆಂಕಪ್ಪ ಗೌಡ, ಜಿಲ್ಲಾ ಧಾರ್ಮಿಕ ಪರಿಷತ್ ನ ಸದಸ್ಯ ಲಕ್ಷ್ಮೀಶ ಗಟ್ಟಲಡ್ಕ ತಾ.ಪಂ ಮಾಜಿ ಅಧ್ಯಕ್ಷ ಚಿನಿಯ ಕಲ್ತಡ್ಕ, ಮಂಡೆಕೋಲು ಕೃಷಿ ಪತ್ತಿನ ಸಹಕಾರಿ ಸಂಘದ ಅಧ್ಯಕ್ಷ ರಾಮಕೃಷ್ಣ ರೈ, ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷ ಶಿವಪ್ರಸಾದ್ ಉಗ್ರಾಣಿಮನೆ, ಪ್ರಧಾನ ಕಾರ್ಯದರ್ಶಿ ಸುರೇಶ್ ಕಣೆಮರಡ್ಕ ಮೊದಲಾದವರು ಹಾಜರಿದ್ದರು. ಪತ್ರಕರ್ತ ಗಣೇಶ್ ಮಾವಂಜಿ ಸ್ವಾಗತಿಸಿದರು. ಮಾತೃ ಸಮಿತಿಯ ಸಂಚಾಲಕಿ ವಿನುತಾ ಪಾತಿಕಲ್ಲು ವಂದಿಸಿದರು. ಅಚ್ಚುತ ಅಟ್ಟೂರು ಹಾಗೂ ಗಣೇಶ್ ಆಚಾರ್ಯ ಕಾರ್ಯಕ್ರಮ ನಿರೂಪಿಸಿದರು. ಬಳಿಕ ಮಂಡೆಕೋಲು ಗ್ರಂಥಾಲಯದ ಮಕ್ಕಳ ತಂಡ ಪ್ರಸ್ತುತ ಪಡಿಸಿದ ಯಕ್ಷಗಾನ 'ಏಕಾದಶಿ ದೇವಿ ಮಹಾತ್ಮೆ' ಹಾಗೂ ಮಂಗಳಾದೇವಿ ಮೇಳದ ಕಲಾವಿದರು ಪ್ರಸ್ತುತಪಡಿಸಿದ 'ಸಾರ್ಲಪಟ್ಟೊದ ಸತ್ಯ' ಯಕ್ಷಗಾನ ಕಾರ್ಯಕ್ರಮ ನೆರೆದವರ ಮನರಂಜಿಸಿತು.

ಮಂಡೆಕೋಲು ಮಹಾವಿಷ್ಣು ಮೂರ್ತಿ ಅಷ್ಟಬಂದ ಪುನಃ ಪ್ರತಿಷ್ಠಾ ಬ್ರಹ್ಮಕಲಶೋತ್ಸವ ಧಾರ್ಮಿಕ ಸಭಾ ಕಾರ್ಯಕ್ರಮ ಸಂಪನ್ನ

ಸಂಸ್ಕಾರ ಕಲಿಸುವ, ಜಾತಿ ಪಕ್ಷ ಬೇದ ಮರೆತು ಎಲ್ಲರನ್ನೂ ಒಂದಾಗಿಸುವ ಶ್ರದ್ಧಾ ಕೇಂದ್ರ ದೇವಸ್ಥಾನ. ದೇವಸ್ಥಾನದ ಎಲ್ಲ ಕಾರ್ಯದಲ್ಲಿ ಸ್ವಯಂ ಪ್ರೇರಣೆಯಿಂದ ತೊಡಗಿಸಿಕೊಂಡಾಗ ಸಂಸ್ಕಾರ ಸಿಗುತ್ತದೆ" ಎಂದು ಎಡನೀರು ಶಂಕರಾಚಾರ್ಯ ಪೀಠದ ಸಚ್ಚಿದಾನಂದ ಭಾರತೀ ಮಹಾಸ್ವಾಮಿಗಳು ಹೇಳಿದರು. ಮಂಡೆಕೋಲು ಶ್ರೀ ಮಹಾವಿಷ್ಣು ಮೂರ್ತಿ ದೇವಸ್ಥಾನದ ಎ.30ರಂದು ನಡೆದ ಸಭಾ ಕಾರ್ಯಕ್ರಮವನ್ನು ದೀಪ ಬೆಳಗಿಸಿ, ಆಶೀರ್ವಚನ ನೀಡಿದರು.

"ಮಧ್ಯ ವಯಸ್ಸಿನ ಮಕ್ಕಳು ದೇಸ್ಥಾನಕ್ಕೆ ಬರುವುದು ಕಡಿಯಾಗುತ್ತಿದೆ. ಆ ಮಕ್ಕಳನ್ನು ಒತ್ತಾಯ ಪೂರ್ವಕವಾಗಿಯಾದರೂ ದೇವಸ್ಥಾನಕ್ಕೆ ಕರೆದುಕೊಂಡು ಬರಬೇಕು. ಆಗ ನಮ್ಮ ಸಂಸ್ಕಾರ, ಪರಂಪರೆಯನ್ನು ಮುಂದಿನ ಪೀಳಿಗೆಗೆ ಹಂಚಲು ಸಾಧ್ಯವಾಗುತ್ತದೆ" ಎಂದು ಹೇಳಿದರು.

ಧಾರ್ಮಿಕ ಉಪನ್ಯಾಸ ನೀಡಿದ ಕುಂಟಾರು ರವೀಶ ತಂತ್ರಿಯವರು, ದೇವರು ಬಿಂಬವಾದರೆ ನಾವು ಪ್ರತಿಬಿಂಬವಿದ್ದಂತೆ. ಊರಿನ ಶ್ರದ್ಧಾಕೇಂದ್ರದಲ್ಲಿ ಆಗಬೇಕಾದ ಕಾರ್ಯ ಚೆನ್ನಾಗಿ ನಡೆದರೆ ಊರಿಗೇ ಶ್ರೆಯಸ್ಸು ಆಗುತ್ತದೆ" ಎಂದು ಹೇಳಿದರು. ಮಾಜಿ ಸಚಿವ ಎಸ್.ಅಂಗಾರ ಮಾತನಾಡಿ, ದೇವರು ಜಾತಿ–ಧರ್ಮವನ್ನು ನೋಡದೇ ಭಕ್ತಿ ಒಲಿಯುತ್ತಾನೆ" ಮಕ್ಕಳು ಮುಗ್ದತೆಯಲ್ಲಿಯೇ ದೇವತಾ ಕರ್ಯಗಳಲ್ಲಿ ಜೋಡಿಸಿಕೊಳ್ಳವ ಕೆಲಸ ಆಗಬೇಕು , ಅಲ್ಲದೇ ಮಕ್ಕಳ ಮುಗ್ದತೆಯಲ್ಲಿಯೇ ಅವ–ರಿಗೆ ಧರ್ಮ ಸಂಸ್ಕೃತಿಗಳನ್ನು ಕಲಿಸಿದಾಗ ಅದು ಮುಂದೆ ವರವಾಗಿ ಕಾಣಲು ಸಾಧ್ಯವಾಗಿದೆ ಎಂದು ಹೇಳಿದರು.

ಕುಂಟಾರು ವಾಸುದೇವ ತಂತ್ರಿಗಳು, ಕರ್ಲಪ್ಪಾಡಿ ಶ್ರೀ ಶಾಸ್ತಾವೇಶ್ವರ ದೇವಸ್ಥಾನದ ಅಧ್ಯಕ್ಷ ರಾಜೇಶ್ ಮೇನಾಲ, ಅಜ್ಜಾವರ ಮಹಿಷಾಮರ್ದಿನಿ ದೇವಸ್ಥಾನದ ಆಡಳಿತ ಮೊಕ್ತೇಸರ ಭಾಸ್ಕರ್ ರಾವ್ ಬಯಂಬು, ಆರ್. ಎಸ್.ಎಸ್. ಕರ್ನಾಟಕ ದಕ್ಷಿಣ ಪ್ರಾಂತ ಸಹ ಸೇವಾ ಪ್ರಮುಖ್ ನ.ಸೀತಾರಾಮ, ಕುಕ್ಕೆ ಸುಬ್ರಹ್ಮಣ್ಯ ದೇವಸ್ಥಾನದ ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಮೋಹನ್ ರಾಂ ಸುಳ್ಳಿ, ಜಿಲ್ಲಾ ಧಾರ್ಮಿಕ ಪರಿಷತ್ ಮಾಜಿ ಸದಸ್ಯ ಮುರಳೀಕೃಷ್ಣ ಹಸಂತಡ್ಕ, ಜಿ.ಪಂ. ಮಾಜಿ ಸದಸ್ಯ ಹರೀಶ್ ಕಂಜಿಪಿಲಿ , ದೇರಣ್ಣ ಗೌಡ ಅಡ್ಡಂತಡ್ಕ ಭಾಗವಹಿಸಿದ್ದರು.

ವ್ಯವಸ್ಥಾಪನಾ ಸಮಿತಿ ಅಧ್ಯಕ್ಷ ಕೇಶವಮೂರ್ತಿ ಹೆಬ್ಬಾರ್, ಜೀರ್ಣೋದ್ಧಾರ ಸಮಿತಿ ಅಧ್ಯಕ್ಷ ಸದಾನಂದ ಮಾವಜಿ, ಬ್ರಹ್ಮಕಲಶೋತ್ಸವ ಸಮಿತಿ ಅಧ್ಯಕ್ಷ ಶಿವಪ್ರಸಾದ್ ಉಗ್ರಾಣಿಮನೆ, ಪ್ರಧಾನ ಕಾರ್ಯದರ್ಶಿ ಸುರೇಶ್ ಕಣೆಮರಡ್ಕ, ಜೀರ್ಣೋದ್ಧಾರ ಸಮಿತಿ ಪ್ರಧಾನ ಕಾರ್ಯದರ್ಶಿ ರಾಮಚಂದ್ರ ಮಾಸ್ತರ್ ವೇದಿಕೆಯಲ್ಲಿ ಇದ್ದರು.ಬ್ರಹ್ಮಕಶೋತ್ಸವ ಸಮಿತಿ ಕಾರ್ಯದರ್ಶಿ ಜಯರಾಜ್ ಕುಕ್ಕೆಟ್ಟಿ ಸ್ವಾಗತಿಸಿದರು. ನಿವೃತ್ತ ಶಿಕ್ಷಕ ಅಚ್ಯುತ ಅಟ್ಟೂರು ಕಾರ್ಯಕ್ರಮ ನಿರೂಪಿಸಿದರು.

ಮಂಡೆಕೋಲು ಗ್ರಾ.ಪಂ ಗ್ರಂಥಾಲಯದಲ್ಲಿ ನಿರಂತರ 10 ದಿನಗಳ ಮಕ್ಕಳ ಬೇಸಿಗೆ ಶಿಬಿರ ಸಂಪನ್ನ

ಮಂಡೆಕೋಲು ಗ್ರಾಮ ಪಂಚಾಯತ್ ಗ್ರಂಥಾಲಯದಲ್ಲಿ ಎ.12ರಂದು ಮಕ್ಕಳ ಬೇಸಿಗೆ ಶಿಬಿರವನ್ನು ಅಮರಮಡ್ನೂರು ಶಾಲೆಯ ಮುಖ್ಯೋಪಾಧ್ಯಾಯಿನಿ ಶ್ರೀಮತಿ ರೂಪವಾಣಿ ಉದ್ಘಾಟಿಸಿದರು. ಎ. 22ವರೆಗೆ ಲತಾಮಧುಸೂದನ್ ರವರ ಮುಖೇನ ಶಿಬಿರವು ಸಂಪನ್ನಗೊಂಡಿತು.

ಶಿಬಿರದಲ್ಲಿ ವಿವಿಧ ಚಟುವಟಿಕೆಗಳಾದ ಯೋಗ, ಧ್ಯಾನ, ಕ್ರಾಫ್ಟ್, ಕಸದಿಂದ ರಸ, ಹಸಿರು ಎಲೆಗಳಿಂದ ಚಿತ್ರಗಳ ರಚನೆ ವ್ಯಕ್ತಿತ್ವ ವಿಕಸನ ಇಂಗ್ಲಿಷ್ ಸ್ಪೋಕನ್ ಕ್ಲಾಸ್ ಸ್ಕಿಲ್ ಡೆವಲಪ್ ಮೆಂಟ್ ಸಾಹಿತ್ಯ ರಚನೆ ಕಥೆ ಬರೆಯುವುದು ಗೊಂಬೆ ತಯಾರಿಕೆ, ಮುಖವಾಡ ತಯಾರಿಕೆ ಕವನ ಶುಭಾಶಯಗಳು ರಂಗೋಲೀ ಬಿಡಿಸುವುದು ಪರಿಸರ ವೀಕ್ಷಣೆ ಮತ್ತು ಕಥೆ ಓದುವುದು, ಓದಿನ ಮಹತ್ವ ಕವಿಗಳ ಪರಿಚಯ,ಕಥೆ ರಚನೆ ಸಂರಕ್ಷಣೆ, ಗೊಂಬೆಗಳು ತಯಾರಿ ವಿವಿಧ ರೀತಿಯ ಚಪ್ಪಾಳೆ, ಮೋಜಿನ ಗಣಿತ ವ್ಯಕ್ತಿತ್ವ ವಿಕಸನ ಚಟುವಟಿಕೆ, ಪದಬಂಧ ಭರತನಾಟ್ಯ, ಯಕ್ಷಗಾನ ಇನ್ನಿತರ ಅನೇಕ ಚಟುವಟಕೆಗಳನ್ನು ಮಾಡಿಸಲಾಗಿದ್ದು ಸಂಪನ್ಮೂಲ ವ್ಯಕ್ತಿಗಳಾಗಿ ಅಮರಮಡ್ನೂರು ಶಾಲೆಯ ಮುಖ್ಯೋಪಾಧ್ಯಾಯಿನಿ ರೂಪವಾಣಿ, ಡಿಂಪಲ್ ಕೆಪಿಎಸ್ ಸ್ಕೂಲ್ 9ನೆ ತರಗತಿ ವಿದ್ಯಾರ್ಥಿ, ಇವರು ಶಿಕ್ಷಣ ಮಹತ್ವ ಬಗ್ಗೆ, ಪತ್ರಿಕೆಗಳಿಂದ ಹೂ ಗುಚ್ಚ ತಯಾರಿ,ಮಾವಿನ ಎಲೆಗಳ ವಿವಿಧ ಶೈಲಿಯ ತೋರಣ, ಕ್ರಾಫ್ಟ್ ತಿಳಿಸಿಕೊಟ್ಟರೆ, ಚಂದ್ರಕಲಾ ಜಾಲ್ಸೂರುರವರು ಜಾನಪದ ಗೀತೆ,ರಂಗೋಲಿ ಬಿಡಿಸುವುದು ವಿವಿಧ ಜಾನಪದ ಶೈಲಿಯ ನೃತ್ಯ ವಿವಿಧ ಮನೋರಂಜನಾ ಆಟಗಳು ಬಗ್ಗೆ ತಿಳಿಸಿಕೊಟ್ಟರು. ಹೇಮ ವೈಲಾಯ, ನೀಲವೇಣಿ, ಲಕ್ಷ್ಮಿ ಲಾವಣ್ಯರವರು–ಗೊಂಬೇಗಳ ತಯಾರಿ ವೇಸ್ಟ್ ಪ್ಲಾಸ್ಟಿಕ್ ಗಳಿಂದ ಕರಕುಶಲ ವಸ್ತುಗಳ ತಯಾರಿಕೆ ಅಭಿನಯ ನೃತ್ಯ ಹೇಳಿಕೊಟ್ಟರು. ಅಕ್ಷತಾ ಚೈತ್ರಪ್ರಸಾದ್ ಉಗ್ರಾಣಿಮನೆ– ಕಾಗದಗಳಿಂದ ಬ್ಯಾಗ್ ತಯಾರಿ ಪರಿಸರ ಜಾಗೃತಿ ಸಂದೇಶ ಗಳು ವಿವಿಧ ರೀತಿಯ ಚಿತ್ರಗಳನ್ನು ಡ್ರಾಯಿಂಗ್ ಶೀಟಲ್ಲಿ ಬ್ಯಾಗ್ ತಯಾರಿಸಿ ಸಂದೇಶ. ಕೆಲವು ಸ್ಪರ್ಧೆಗಳನ್ನು ನಡೆಸಿ ಬಹುಮಾನ ವಿತರಣೆ ವಿತರಿಸಿದರು. ಪ್ರತೀಕ್ಷಾ ಮತ್ತು ತ್ರಿಶಾ ಮಾವಂಜಿರವರು ವಿವಿಧ ಎಲೆಗಳಿಂದ ಪ್ರಾಣಿಪಕ್ಷಿಗಳ ಆಕೃತಿ ತಯಾರಿ ವಿವಿಧ ಹಾಡುಗಾರಿಕೆ. ವಿವಿಧ ರೀತಿಯ ಆಟಗಳು ಬಗ್ಗೆ ವಿವ–ರಿಸಿದರು. ಗೀತಾಂಜಲಿ, ಮೊಂಟೆಸ್ಸರಿ ಶಿಕ್ಷಣ ಸಂಸ್ಥೆಯ ವ್ಯವಸ್ಥಾಪಕರು –ಸ್ಪೋಕನ್ ಇಂಗ್ಲಿಷ್ ಸರಳವಾಗಿ ಇಂಗ್ಲಿಷ್ ಕಲಿಕೆಯ ಪರಿಚಯ ಸ್ಕಿಲ್ ಡೆವೆಲಪ್ ಮೆಂಟ್, ಇಂಗ್ಲಿಷಿನಲ್ಲಿ ಹಾಡುಗಳು ಮತ್ತು ಪುತ್ಯ ಶಾಲೆಮುಖ್ಯೋಪಾಧ್ಯಾಯಿನಿ ಲಕ್ಷ್ಮೀಟೀಚರ್ ಮತ್ತು ಕನ್ಯಾನ ಶಾಲೆಯ ಸುನಿತಾ ಟೀಚರ್ ಅಭಿನಯ ಗೀತೆಗಳು, ಪದಬಂಧ ರಚನೆ ಮೋಜಿನ ಗಣಿತ ಮೋಜಿನ ಆಟಗಳು, ತೆಂಗಿನ ಗ–ರಿಗಳಿಂದ ಪಕ್ಷಿಗಳ ಮಾದರಿ ತಯಾರಿಕೆ ಪೇಪರ್ ಕ್ರಾಫ್ಟ್ ಪಕ್ಷಿಗಳ ಬಗ್ಗೆ ಮಾಹಿತಿ ಅಂತ್ಯಾಕ್ಷರಿ ಪದಗಳ ಆಟ ಕಲಿಸಿದರು.

ಸೌಮ್ಯಾ ವಲಯ ಅರಣ್ಯಾಧಿಕಾ–ರಿಗಳು ಮತ್ತು ಸಿಬ್ಬಂದಿ ವರ್ಗದವರು ಪರಿಸರ ವೀಕ್ಷಣೆ ಮತ್ತು ಕಾಡಿನ ರಕ್ಷಣೆ ನಮ್ಮ ಕರ್ತವ್ಯಗಳ ಪರಿಚಯ, ಹುದ್ದೆಯ ಪರಿಚಯ ಪಕ್ಷಿಗಳ ಪರಿಚಯ ಪ್ರಾಣಿಪಕ್ಷಿಗಳ ರಕ್ಷಣೆಯ ಬಗ್ಗೆ ಅರಿವು ಸ್ಪರ್ಧೆಗಳನ್ನು ನಡೆಸಿ ಬಹುಮಾನ ವಿತರಣೆ ಮಾಡಿದರು. ನವೀನ್ ಅಡ್ಕಾರ್ –ಕಲಾವಿದರು, ಕ್ರಿಯಾತ್ಮಕ ವಿನ್ಯಾಸಕಾರರು ಮುಖವಾಡ ತಯಾರಿಕೆ ಮತ್ತು ಮಾಹಿತಿ ಬಗ್ಗೆ ತಿಳಿಸಿಕೊಟ್ಟರು.

ಉದಯಭಾಸ್ಕರ್ ಕವಿ ಸಾಹಿತಿ ಚಿಂತಕರು ವಿಷಯ –ಸಾಹಿತ್ಯದ ಅರಿವು ಕಾರ್ಯಾಗಾರ ಕಥ–'ಗಳ ರಚನೆ ಆಟಗಳು, ಶುಭಾಶಯ ಪತ್ರಗಳ ಬರೆಯುವಿಕೆ ಬರೆಯುವ ರೀತಿ ತಿಳಿಸುವುದು ಕವಿ ಲೇಖಕರ ಪರಿಚಯ ಮಾಡಿಕೊಟ್ಟರು. ಮಧುಸೂದನ್ ಮತ್ತು ಲತಾ ಮಧುಸೂದನ್ –ವಿಷಯ, ಮಕ್ಕಳ ಜೊತೆಗೆ ಸಂವಾದ ಸಾಮಾನ್ಯ ಜ್ಞಾನ ಪರಿಶೀಲನೆ, ವಿವಿಧ ರಸಪ್ರಶ್ನೆ,ಸಂಸ್ಕಾರ ಮತ್ತು ಗೌರವ ಪುಸ್ತಕ ಗಳ ಬಳಕೆಯ ಬಗ್ಗೆ ಮಾಹಿತಿ ನೀಡಿದರು.

ಸಮಾರೋಪ ಸಮಾರಂಭ ಕಾರ್ಯಕ್ರಮ ಅಧ್ಯಕ್ಷತೆ ಮಧುಸೂದನ್ ಮಹಿಸಿದ್ದರು. ಮುಖ್ಯ ಅತಿಥಿಗಳಾಗಿ ಲತಾ ಮಧುಸೂದನ್ ರಮೇಶ್ ಪಿ ಪಿಡಿಓ ಗ್ರಾಮ ಪಂಚಾಯತ್ ಮಂಡೆಕೋಲು, ಪುತ್ಯ ಸ.ಕಿ.ಪ್ರಾ.ಶಾಲೆಯ ಮುಖ್ಯಶಿಕ್ಷಕಿ ಲಕ್ಷ್ಮಿ ಟೀಚರ್ ಭಾಗವಹಿಸಿದ್ದರು. ಮಕ್ಕಳ ಅನಿಸಿಕೆ ಮತ್ತು ಸಾಂಸ್ಕೃತಿ–ಕ ಕಾರ್ಯಕ್ರಮ ಪ್ರಮಾಣ ಪತ್ರ ವಿತರಣೆ ಒಂದು ದಿನವೂ ತಪ್ಪದೇ ಹಾಜರಾದ ವಿದ್ಯಾರ್ಥಿಗಳಿಗೆ ವಿಶೇಷ ಬಹುಮಾನ, ಶಿಬಿರಕ್ಕೆ ಭಾಗವಹಿಸಿದ ಎಲ್ಲ ಮಕ್ಕಳಿಗೂ ಬಹುಮಾನ, ಮತ್ತು ಶಿಸ್ತಿನ 2 ವಿದ್ಯಾರ್ಥಿಗಳಿಗೆ ವಿಶೇಷ ಆಕರ್ಷಕ ಬಹುಮಾನ ನಿಡಲಾಯಿತು. ಸಂಪನ್ಮೂಲ ವ್ಯಕ್ತಿಗಳ ಅಭ

ಸುಳ್ಯ: ಅವಿ ಮಕ್ಕಳ ಬೇಸಿಗೆ ಶಿಬಿರ ಸಮಾರೋಪ

ವಿಶ್ವ ಹಿಂದು ಪರಿಷದ್ ಬಜರಂಗದಳ ಸುಳ್ಯ ನಗರ ಇದರ ಆಶ್ರಯದಲ್ಲಿ ಎಪ್ರಿಲ್ 20 ರಿಂದ ಮೇ 2 ರ ವರೆಗೆ ನಡೆದ ಮಕ್ಕಳ ಬೇಸಿಗೆ ಶಿಬಿರವು ಸಂಪನ್ನವಾಯಿತು.

ಶಿಬಿರದ ಸಮಾರೋಪ ಸಮಾರಂಭವು ಸುಳ್ಯ ಶ್ರೀ ಚೆನ್ನಕೇಶವ ದೇವಾಲಯದ ಸಭಾ ಭವನದಲ್ಲಿ ನಡೆಯಿತು ಸಮಾರಂಭದ ಅಧ್ಯಕ್ಷತೆಯನ್ನು ಪದ್ಮಶ್ರೀ ಪುರಸ್ಕೃತ ಗಿರೀಶ್ ಭಾರದ್ವಾಜ್ ಮಹಿಸಿದ್ದರು. ಸಂಪನ್ಮೂಲ ವ್ಯಕ್ತಿ ಅನುರಾಧ ಕುರುಂಜಿ ಮಾತನಾಡುತ್ತಾ ಮಕ್ಕಳು ನಮ್ಮ ಮನೆಯಲ್ಲಿ ಅರಳುವ ಹೂವುಗಳು ಇವುಗಳನ್ನು ಯಾವ ರೀತಿಯಲ್ಲಿ ಬಳಸಿಕೊಳ್ಳಬೇಕು ಎಂಬುವುದನ್ನು ಪೋಷಕರು ಯೋಚಿಸಬೇಕಾಗಿದೆ ಎಂದು ಹೇಳಿದರು. ವಿದ್ಯಾವಂತರಿಂದ ಇಂದು ಕೆಟ್ಟದ್ದು ಅನ್ನುವ ಕಾಲಘಟ್ಟಕ್ಕೆ ತಲುಪಿತ್ತೇವೆ ಆದರೆ ಹಿಂದಿನ ಕಾಲದಲ್ಲಿ ಪೋಲಿಸ್ ಠಾಣೆ ಮತ್ತು ಕೋರ್ಟ್ ಕಛೇರಿಗಳ ಸಂಖ್ಯೆ ಕಡಿಮೆ ಇದ್ದವು ಆದರೆ ಇಂದು ಎಲ್ಲವು ಹೆಚ್ಚಾಗಿದೆ ಅದೇ ಮಾದರಿಯಲ್ಲಿ ಪ್ರಕರಣಗಳು ಹೆಚ್ಚಾಗುತ್ತಿದೆ ಇದನ್ನು ತಡೆಯಲು ಸಂಸ್ಕೃತಿಯ ಮೂಲಕ ಸಾಧ್ಯವೆಂದು ಹೇಳಿದರು. ಭಜನೆಯಿಂದ ಒಂದು ಗೂಡಿಸುವ ಕೆಲಸವಾಗುತ್ತಿದೆ ಭಜನೆ ಮಾಡದೇ ಇರುವ ಮನೆಗಳಲ್ಲಿ ವಿಭಜನೆ ಪ್ರಾರಂಭವಾಗುತ್ತದೆ ಎಂದು ಹೇಳಿದರು. ಸಭಾ ವೇದಿಕೆಯಲ್ಲಿ ವಿಶ್ವಹಿಂದು ಪರಿಷದ್ ಅಧ್ಯಕ್ಷರಾದ ಸೋಮಶೇಖರ್ ಪೈಕ, ಉಮೇಶ್ ಸಾಯಿರಾಂ, ಕಿರಣ್ ಕುಮಾರ್ ಬೆಟ್ಟಂಪ್ಪಾಡಿ ಉಪಸ್ಥಿತರಿದ್ದರು.

ಸಮಾರೋಪ ಸಮಾರಂಭದಲ್ಲಿ ಸುಮಾರು 204 ಮಕ್ಕಳು ಮತ್ತು ಪೋಷಕರು, ಬಿಜೆಪಿ ಮಂಡಲ ಸಮಿತಿ ಅಧ್ಯಕ್ಷರಾದ ವೆಂಕಟ್ ವಳಲಂಬೆ, ನಮೀನ್ ಎಲಿಮಲೆ, ದೇವಿಪ್ರಸಾದ್ ಅತ್ಯಾಡಿ ಸೇರಿದಂತೆ ಇತರರು ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿದ್ದರು ಅಭಿಜ್ಞಾ ಭಟ್ ಸ್ವಾಗತಿಸಿ, ವರ್ಷಿತ್ ಚೊಕ್ಕಾಡಿ ವಂದಿಸಿದರು. ವಿಧ್ಯಾ ಸರಸ್ವತಿ ಕಾರ್ಯಕ್ರಮ ನಿರೂಪಿಸಿದರು.

ಶಿವಮೊಗ್ಗ ಲೋಕಸಭಾ ಕ್ಷೇತ್ರ ಚುನಾವಣೆ ಹಿನ್ನಲೆಯಲ್ಲಿ ಸುಳ್ಯ ಶಾಸಕಿ ನೇತೃತ್ವದಲ್ಲಿ ಚಾವಡಿ ಸಭೆ

ಶಿವಮೊಗ್ಗ ಲೋಕಸಭಾ ಕ್ಷೇತ್ರ ಚುನಾವಣೆ ಹಿನ್ನಲೆಯಲ್ಲಿ ಸುಳ್ಯ ಶಾಸಕಿ ನೇತೃತ್ವದಲ್ಲಿ ಉಪ್ಪುಂದ ಜನತಾ ಕಾಲನಿಗೆ ಭೇಟಿಮಾಡಿ ಚಾವಡಿ ಸಭೆ ನಡೆಸಲಾಯಿತು. ಈ ಸಂದರ್ಭದಲ್ಲಿ ಶಾಸಕ ಗುರುರಾಜ ಗಂಟಿಹೊಳಿ ಅವರ ಪತ್ನಿ ಅನುರಾಧ, ಪಕ್ಷದ ಜಿಲ್ಲಾ ಎಸ್ ಸಿ ಮೊರ್ಚಾ ಅಧ್ಯಕ್ಷ ಅಶೋಕ ಗಂಗೊಳ್ಳಿ, ಪ್ರಧಾನ ಕಾರ್ಯದರ್ಶಿ ಉಮೇಶ್ ಬೈಂದೂರು, ದ.ಕ ಜಿಲ್ಲಾ ಸಾಮಾಜಿ–ಕ ಜಾಲಾತಾಣ ಪ್ರಕೋಷ್ಠದ ಸದಸ್ಯ ಪ್ರಸಾದ್ ಕಾಟೂರು ಕಾರ್ಯಕರ್ತರಾದ ಅಂಶಿತ್ ದೊಳ್ತಿಲ, ಕೀರ್ತನ್, ಧಿರೇಶ್, ಉಪಸ್ಥಿತರಿದ್ದರು.

ನಾಟಿ ವೈದ್ಯ ಗೌರಮ್ಮರಿಗೆ ಸತೀಶ್ ಕುಂಪಾಲರಿಂದ ಸನ್ಮಾನ

ಹಲವಾರು ಜನರಿಗೆ ಹಳ್ಳಿ ಮದ್ದು ನೀಡಿ ಜೀವ ಉಳಿಸಿದ ನಾಟಿವೈದ್ಯ ಗೌರಮ್ಮ ಕೇರ್ಪಳ ಇವರನ್ನು 180ನೇ ಬೂತಿನ ಸಭೆಯಲ್ಲಿ ಬಿಜೆಪಿ ಜಿಲ್ಲಾಧ್ಯಕ್ಷರದ ಸತೀಸ್ ಕುಂಪಾಲ ಅವರು ಸಾಲು ಹೊದಿಸಿ ಗೌರವಿಸಿ ಆಶೀರ್ವಾದ ಪಡೆದು ಕೊಂಡರು. ಈ ಸಂದರ್ಭದಲ್ಲಿ ಮಂಡಲ ಬಿಜೆಪಿ ಅಧ್ಯಕ್ಷರದ ವೆಂಕಟ್ ಒಳಲಂಬೆ, ಪ್ರಧಾನ ಕಾರ್ಯದರ್ಶಿ ವಿನಯ್ ಕಂದಡ್ಕ, ಮಂಗಳೂರು ಮಹಾನಗರ ಪಾಲಿಕೆಯ ಮೇಯರ್ ಪ್ರೇಮಾನಂದ ಶೆಟ್ಟಿ,ನಿತಿನ್ ಶೆಟ್ಟಿ, ಸುನಿಲ್ ಕೇರ್ಪಳ, ಜಿನಪ್ಪ ಪೂಜಾರಿ, ನಗರ ಪಂಚಾಯತ್ ಸದಸ್ಯ ಸುಧಾಕರ್ ಕುರುಂಜಿ ಭಾಗ್, ಸಿಎ. ಬ್ಯಾಂಕ್. ನಿರ್ದೇಶಕ ಶಿವರಾಮ ಕೇರ್ಪಳ, ಚಂದ್ರಶೇಖರ ನಲ್ಲೂರಯ,ಚಂದ್ರಶೇಖರ ಕೇರ್ಪಳ, ತೀರ್ಥರಾಮ ಕೇರ್ಪಳ, ಉಪಸ್ಥಿತರಿದ್ದರು.

ಸಂಪಾಜೆ; ಹೋಟೆಲ್ ಗೆ ಡಿಕ್ಕಿ ಹೊಡೆದ ಕಾರು – ದಂಪತಿಗೆ ಗಂಭೀರ ಗಾಯ

ಚಾಲಕನ ನಿಯಂತ್ರಣ ತಪ್ಪಿ ಹೋಟೆಲೊಂದಕ್ಕೆ ಕಾರೊಂದು ಡಿಕ್ಕಿ ಹೊಡೆದು ಕಾರಿನಲ್ಲಿದ್ದ ದಂಪತಿಗೆ ಗಂಭೀರ ಗಾಯವಾದ ಘಟನೆ ಮೇ.3ರಂದು ಬೆಳಿಗ್ಗೆ ಸಂಪಾಜೆಯಲ್ಲಿ ನಡೆದಿದೆ.

ವಿಟ್ಲದ ಅಡ್ಯನಡ್ಕ ದಂಪತಿಗಳು ಕಾ–ರಿನಲ್ಲಿ ಪುತ್ತೂರಿನಿಂದ ಮಡಿಕೇರಿ ಕಡೆಗೆ ಹೋಗುತ್ತಿದ್ದ ವೇಳೆ ಸಂಪಾಜೆಯ ಹೈವೆ ಹೋಟೆಲ್ ಬಳಿ ಚಾಲಕನ ನಿಯಂತ್ರಣ ತಪ್ಪಿದ ಕಾರು ಹೋಟೆಲಿನ ಮುಂಭಾಗದ ಗೋಡೆಗೆ ಡಿಕ್ಕಿ ಹೊಡೆದಿದೆ. ಕಾರು ಚಾಲಕ ಹಾಗೂ ಮುಂಭಾಗದಲ್ಲಿ ಕುಳಿತಿದ್ದ ಅವರ ಪತ್ನಿಗೆ ಗಂಭೀರ ಗಾಯವಾಗಿದ್ದು, ಅವರನ್ನು ಸ್ಥಳೀಯರು ಸೇರಿ ಎರಡು ಅಂಬ್ಯುಲೆನ್ಸ್ ಮೂಲಕ ಸುಳ್ಯದ ಕೆವಿಜಿ ಆಸ್ಪತ್ರೆಗೆ ಕರೆದೊಯ್ದು ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ.

ಪಡ್ಪಿನಂಗಡಿ; ಸರಣಿ ಅಪಘಾತ– ಕಾರುಗಳು ಜಖಂ

ನಿಂತಿಕಲ್ಲು ಕಡೆ ಹೋಗುತ್ತಿದ್ದ ಕಾರು ರಸ್ತೆಯಲ್ಲಿ ಸತ್ತಿದ್ದ ಬೆಕ್ಕನ್ನು ಕಂಡು ಬ್ರೇಕ್ ಹಾಕಿದ ಪರಿಣಾಮ ಪಿಕಪ್ ವಾಹನಕ್ಕೆ ಡಿಕ್ಕಿ ಹೊಡೆದ ಬಳಿಕ ಎದುರಿಂದ ಬರುತ್ತಿದ್ದ ಕಾರಿಗೆ ಡಿಕ್ಕಿ ಹೊಡೆದ ಘಟನೆ ಮೇ.2 ರಂದು ಸಂಜೆ ಪಡ್ಪಿನಂಗಡಿಯಿಂದ ನಡೆದಿದೆ.

ಪಡ್ಪಿನಂಗಡಿ ಮುಖ್ಯ ರಸ್ತೆಯಲ್ಲಿ ನಿಂತಿಕಲ್ಲು ಕಡೆ ಹೋಗುತ್ತಿದ್ದ ಕಾರು ರಸ್ತೆಯಲ್ಲಿ ಸತ್ತು ಬಿದ್ದಿದ್ದ ಬೆಕ್ಕನ್ನು ಕಂಡು ಅದನ್ನು ತಪ್ಪಿಸಲು ಬ್ರೇಕ್ ಪರಿಣಾಮ ನಿಯಂತ್ರಣ ತಪ್ಪಿ ಎದು–ರಿನಿಂದ ಹೋಗುತ್ತಿದ್ದ ಪಿಕಪ್ ವಾಹನಕ್ಕೆ ಡಿಕ್ಕಿ ಹೊಡೆದು, ಬಳಿಕ ಎದುರಿನಿಂದ ಬರುತ್ತಿದ್ದ ಇನ್ನೊಂದು ಕಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ಕಾರು ಹೆಚ್ಚಿನ ಪ್ರಮಾಣದ ಜಖಂಗೊಂಡಿದೆ. ಎದುರಿನಿಂದ ಬಂದ ಕಾರಿನ ಒಂದು ಬದಿಗೆ ಹಾನಿಯಾಗಿದೆ. ಯಾವುದೇ ಪ್ರಾಣಪಾಯ ಸಂಭವಿಸಿಲ್ಲ ಎಂದು ತಿಳಿದುಬಂದಿದೆ.

ಸುಬ್ರಹ್ಮಣ್ಯ: ಕಸ ವಿಲೇವಾರಿ ವಾಹನ ಪಲ್ಟಿ

ಕುಲ್ಕುಂದ ಕಡೆಯಿಂದ ಕುಕ್ಕೆ ಸುಬ್ರಹ್ಮಣ್ಯಕ್ಕೆ ಬರುತಿದ್ದ ಸುಬ್ರಹ್ಮಣ್ಯ ಗ್ರಾ.ಪಂ ನ ಕಸ ವಿಲೇವಾರಿ ವಾಹನ ಕುಲ್ಕುಂದ ಎಂಬಲ್ಲಿ ರಸ್ತೆಯ ಎಡಬದಿ ಚರಂಡಿಗೆ ಬಿದ್ದಿರುವುದಾಗಿ ವರದಿಯಾಗಿದೆ.

ಚಾಲಕ ಸಣ್ಣ ಪುಟ್ಟ ಗಾಯಗಳಾಗಿದ್ದು ಯಾವುದೇ ಪ್ರಾಣಪಾಯ ಸಂಭವಿಸಿಲ್ಲ, ವಾಹನದ ಎದುರಿನ ಗಾಜುಪುಡಿಯಾಗಿದ್ದು ವಾಹನದ ಎಡಬದಿಗೆ ಹಾನಿಯಾಗಿದೆ..

ಕೋಲ್ಚಾರು– ಕಣಕ್ಕೂರು ಬಳಿ ಚಾಲಕನ ನಿಯಂತ್ರಣ ತಪ್ಪಿ ಲಾರಿ ಪಲ್ಟಿ

ಆಲೆಟ್ಟಿ ಗ್ರಾಮದ ಕೋಲ್ಚಾರಿನ ಕಣಕ್ಕೂರು ಬಳಿ ಚಾಲಕನ ನಿಯಂತ್ರಣ ತಪ್ಪಿ ಎಳನೀರು ತುಂಬಿದ ಲಾರಿಯೊಂದು ಕಂದಕ್ಕೆ ಉರುಳಿದ ಘಟನೆ ವರದಿಯಾಗಿದೆ. ಮೈಸೂರಿನಿಂದ ಎಳನೀರು ತುಂಬಿದ ಲಾರಿ ಕೋಲ್ಚಾರು ಮಾರ್ಗವಾಗಿ ಕೇರಳದ ಕಡೆಗೆ ಸಂಚರಿಸುತ್ತಿದ್ದ ವೇಳೆಯಲ್ಲಿ ಘಟನೆ ಸಂಭವಿಸಿದೆ. ಲಾರಿಯಲ್ಲಿ ಚಾಲಕ ಮತ್ತು ಕ್ಲೀನರ್ ಮಾತ್ರ ಇದ್ದು ಅಲ್ಪ ಸ್ವಲ್ಪ ಗಾಯಗಳಿಂದ ಪಾರಾಗಿದ್ದಾರೆ. ಸ್ಥಳೀಯ ಕಣಕ್ಕೂರಿನ ಯುವಕರು ಅವರಿಗೆ ಪ್ರಥಮ ಚಿಕಿತ್ಸೆ ನೀಡಿ ಉಪಚರಿಸಿದರು.

ಅರಂತೋಡು : ಬಾವಿಗೆ ಇಳಿದ ಯುವಕನ ತಲೆಗೆ ಕಲ್ಲು ಬಿದ್ದು ಗಂಭೀರ

ಅರಂತೋಡು ಗ್ರಾಮದ ಉಳುವಾರು ಎಂಬಲ್ಲಿ ಯುವಕನೋರ್ವ ಬಾವಿಗೆ ಇಳಿದ ಸಂದರ್ಭ ಮೇಲಿನಿಂದ ಕಲ್ಲು ಬಿದ್ದು ಗಂಭೀರ ಗಾಯಗೊಂಡ ಘಟನೆ ಮೇ.2ರಂದು ನಡೆದಿದೆ. ಅರಂತೋಡು ಗ್ರಾಮದ ಉಳುವಾರು ಮಲ್ಲಡ್ಕ ನಿವಾಸಿ ಯಶವಂತ ಗೌಡ ಅವರ ಪುತ್ರ ತರುಣ್ ಬಾವಿಗೆ ಇಳಿದ ವೇಳೆ ಈ ಘಟನೆ ನಡೆದಿದೆ. ತಲೆಗೆ ಗಂಭೀರ ಗಾಯಗೊಂಡ ತರುಣ್ ಅವರನ್ನು ಹೆಚ್ಚಿನ ಚಿಕಿತ್ಸೆಗೆ ಮಂಗಳೂರಿನ ಪಸ್ಟ್ ನ್ಯೂರೋ ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿದುಬಂದಿದೆ.

ಸ್ಥಳಾಂತರಗೊಂಡು ಶುಭಾರಂಭಗೊಂಡಿದೆ
ಸರ್ವಾ ಫಾರ್ಮ್
ಶ್ರೀ ಮುತ್ತಪ್ಪ ನಗರ ಮುಖ್ಯರಸ್ತೆ
ಗುತ್ತಿಗಾರು
ನಮ್ಮಲ್ಲಿ ಬ್ರಾಯಿಲರ್, ಲೈಸನ್ ಹಾಗೂ ನಾಟಿಕೋಳಿ ಚಿಲ್ಲರೆ ಹಾಗೂ ರಖಂ ದರದಲ್ಲಿ ದೊರೆಯುತ್ತದೆ.
ಹಂದಿ ಮಾಂಸ ಲಭ್ಯವಿದೆ.
ಕಳೆದ 20 ವರ್ಷಗಳಿಂದ ಗುತ್ತಿಗಾರಿನಲ್ಲಿ ಕಾರ್ಯಚರಿಸುತ್ತಿರುವ ಸರ್ವಾ ಫಾರ್ಮ್ ಮುತ್ತಪ್ಪೇಶ್ವರ ದೈವಸ್ಥಾನದ ಬಳಿಯ ಕಟ್ಟಡಕ್ಕೆ ಸ್ಥಳಾಂತರಗೊಂಡು ಶುಭಾರಂಭಗೊಂಡಿದೆ.
ತಮ್ಮಲ್ಲರ ಸಹಕಾರ ಬಯಸುವ,
ಚಂದ್ರಶೇಖರ ಅಜಡ್ಕ
ಮೊ: 9449662215
6362454315

ಉಬರಡ್ಕ ಮಿತ್ತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ ನಿ. ಉಬರಡ್ಕ ಮಿತ್ತೂರು

50
ನೂತನ ಸಿರಿ ಸಹಕಾರ ಸೌಧ
ಲೋಕಾರ್ಪಣೆ ಮತ್ತು ಸನ್ಮಾನ ಕಾರ್ಯಕ್ರಮ
ಮೇ 04 2024

ಉಬರಡ್ಕ ಮಿತ್ತೂರು ಪ್ರಾಥಮಿಕ ಕೃಷಿ ಪತ್ತಿನ ಸಹಕಾರಿ ಸಂಘ (ನಿ.) ಉಬರಡ್ಕ
ನಂ.ಡಿ..ಆರ್.ಪಿ/ ಆರ್. ಜಿ. ಎನ್./ 13763/ 97–98 ಅಂಚೆ: ಉಬರಡ್ಕ ಮಿತ್ತೂರು, ಸುಳ್ಯ ತಾಲೂಕು ದ.ಕ 574248

ನೂತನ ಕಟ್ಟಡ ಸಿರಿ ಸಹಕಾರ ಸೌಧ ಲೋಕಾರ್ಪಣೆ ಮತ್ತು ಸನ್ಮಾನ ಕಾರ್ಯಕ್ರಮ

ದಿನಾಂಕ: 04-05-2024ನೇ ಶನಿವಾರ । ಸಮಯ: ಬೆಳಗ್ಗೆ ಗಂಟೆ 10.30ಕ್ಕೆ । ಸ್ಥಳ: ಉಬರಡ್ಕ ಮಿತ್ತೂರು

ಸಭಾಧ್ಯಕ್ಷತೆ : ಶ್ರೀ ಎಂ ದಾಮೋದರ ಗೌಡ ಮದುವೆಗದ್ದೆ, ಅಧ್ಯಕ್ಷರು, ಪ್ರಾ.ಕೃ.ಪ.ಸ. ಸಂಘ ನಿ. ಉಬರಡ್ಕ ಮಿತ್ತೂರು
ಸಿರಿ ಸಹಕಾರ ಸೌಧ ಲೋಕಾರ್ಪಣೆ ಮತ್ತು ದೀಪ ಪ್ರಜ್ವಲನೆ : ಸಹಕಾರ ರತ್ನ ಡಾ। ಎಂ. ಎನ್. ರಾಜೇಂದ್ರಕುಮಾರ್, ಮಾನ್ಯ ಅಧ್ಯಕ್ಷರು, ಕರ್ನಾಟಕ ಸಹಕಾರ ಮಾರಾಟ ಮಹಾಮಂಡಳ(ಅ.) ಬೆಂಗಳೂರು, ಅಧ್ಯಕ್ಷರು ದ.ಕ ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಅ. ಮಂಗಳೂರು
ಕಛೇರಿ ಉದ್ಘಾಟನೆ : ಕು। ಭಾಗೀರಥಿ ಮುರುಳ್ಯ, ಶಾಸಕರು. ಸುಳ್ಯ ವಿಧಾನಸಭಾ ಕ್ಷೇತ್ರ
ಭದ್ರತಾ ಕೊಠಡಿ ಉದ್ಘಾಟನೆ : ಶ್ರೀ ಎಸ್. ಅಂಗಾರ, ಮಾಜಿ ಸಚಿವರು, ಕರ್ನಾಟಕ ಘನ ಸರಕಾರ
ಎಮ್.ಎಸ್.ಸಿ. ಯೋಜನೆಯಡಿಯಲ್ಲಿ ನಿರ್ಮಾಣಗೊಂಡ ಗೋದಾಮು ಉದ್ಘಾಟನೆ : ಶ್ರೀ ಶಶಿಕುಮಾರ್ ರೈ ಬಾಲ್ಯೊಟ್ಟು, ಮಾನ್ಯ ನಿರ್ದೇಶಕರು, ದ.ಕ. ಜಿ. ಕೇ. ಸ. ಬ್ಯಾಂಕ್ ಅ. ಮಂಗಳೂರು
ಸಭಾಭವನ ಉದ್ಘಾಟನೆ : ಶ್ರೀ ಎಸ್. ಮನ್ಮಥ, ಮಾನ್ಯ ನಿರ್ದೇಶಕರು, ದ.ಕ. ಜಿ. ಕೇ. ಸ. ಬ್ಯಾಂಕ್ ಅ. ಮಂಗಳೂರು
ಮುಖ್ಯ ಅತಿಥಿಗಳು : ಶ್ರೀಮತಿ ಪೂರ್ಣಿಮ ಸೂಂತೋಡು, ಅಧ್ಯಕ್ಷರು, ಗ್ರಾಮ ಪಂಚಾಯತ್ ಉಬರಡ್ಕ ಮಿತ್ತೂರು
ಶ್ರೀಮತಿ ನಿತ್ಯಾನಂದ ಮುಂಡೋಡಿ, (ಸರಕಾರ ರತ್ನ ಪುರಸ್ಕೃತರು) ಅಧ್ಯಕ್ಷರು, ಬಿ.ಎ.ಪಿ.ಸಿ.ಎಂ.ಎಸ್. ಸುಳ್ಯ
ಶ್ರೀ ಚಂದ್ರಾ ಕೋಲ್ಚಾರ್, (ಸಹಕಾರ ರತ್ನ ಪುರಸ್ಕೃತರು), ಅಧ್ಯಕ್ಷರು ದ.ಕ. ಜಿಲ್ಲಾ ಜೇನು ವ್ಯವಸಾಯಿಗಾರರ ಸಹಕಾರಿ ಸಂಘ ನಿ. ಪುತ್ತೂರು
ಶ್ರೀ ಹೆಚ್.ಎನ್. ರಮೇಶ, ಮಾನ್ಯ ಸಹಕಾರ ಸಂಘಗಳ ಉಪನಿಬಂಧಕರು, ಮಂಗಳೂರು
ಶ್ರೀ ಪ್ರಸಾದ್ ಕೌಶಲ್ ಶೆಟ್ಟಿ ಬೆಳ್ಳಿಪ್ಪಾಡಿ, ಅಧ್ಯಕ್ಷರು ದ.ಕ.ಜಿಲ್ಲಾ ಸಹಕಾರಿ ಯೂನಿಯನ್
ಶ್ರೀ ರಮೇಶ್ ದೇಲಂಪಾಡಿ ಅಧ್ಯಕ್ಷರು, ತಾಲೂಕು ಸಹಕಾರಿ ಯೂನಿಯನ್ ಸುಳ್ಯ
ಶ್ರೀಮತಿ ತ್ರಿವೇಣಿ ರಾವ್, ಮಾನ್ಯ ಸಹಕಾರ ಸಂಘಗಳ ಸಹಕಾರ ಸಹಾಯಕ ನಿಬಂಧಕರು, ಪುತ್ತೂರು ಉಪವಿಭಾಗ, ಪುತ್ತೂರು
ಶ್ರೀ ವೆಂಕಟ್ರಮಣ ಕೆದಂಬಾಡಿ, ಆಡಳಿತ ಮೊಕ್ತೇಸರರು, ಮಿತ್ತೂರು ಜೋಡು ದೈವಗಳು
ಶ್ರೀ ರತ್ನಾಕರ ಗೌಡ ಬಳ್ಳಡ್ಕ ನಿಕಟಪೂರ್ವ ಅಧ್ಯಕ್ಷರು, ಶ್ರೀ ನರಸಿಂಹ ದೇವಾಲಯ ಉಬರಡ್ಕ ಮಿತ್ತೂರು

ತಮ್ಮಲ್ಲರನ್ನು ಪ್ರೀತಿಪೂರ್ವಕವಾಗಿ ಆಮಂತ್ರಿಸುವ
ಶ್ರೀ ಜಯಪ್ರಕಾಶ್ ಉರುಂಡೆ ಮುಖ್ಯ ಕಾರ್ಯನಿರ್ವಹಣಾಧಿಕಾರಿ ಹಾಗೂ ಸಿಬ್ಬಂದಿ ವರ್ಗ
ಶ್ರೀ ರಾಜೇಶ್ ಭಟ್ ನೆಕ್ಕಿಲ ಉಪಾಧ್ಯಕ್ಷರು, ಪ್ರಾ.ಕೃ.ಪ.ಸಹಕಾರ ಸಂಘ ಉಬರಡ್ಕ ಮಿತ್ತೂರು
ಶ್ರೀ ಎಂ.ದಾಮೋದರ ಗೌಡ ಮದುವೆಗದ್ದೆ ಅಧ್ಯಕ್ಷರು

ನಿರ್ದೇಶಕರುಗಳು
• ಶ್ರೀ ಗಂಗಾಧರ ಪಿ.ಎಸ್ • ಶ್ರೀ ಭಾಸ್ಕರ ರಾವ್ ಯು.ವಿ • ಶ್ರೀ ಸುರೇಶ ಎಂ. ಹೆಚ್ • ಶ್ರೀ ಜಗದೀಶ ಕಕ್ಕೆಬೆಟ್ಟು • ಶ್ರೀ ಹರಿಪ್ರಸಾದ್ ಪಾನತ್ತಿಲ • ಶ್ರೀ ವಿಜಯಕುಮಾರ್ ಉಬರಡ್ಕ • ಶ್ರೀ ಈಶ್ವರ ಆರ್. ಕಲ್ಚಾರು • ಶ್ರೀ ಹರೀಶ್ ಮಾಣಿಬೆಟ್ಟು • ಶ್ರೀಮತಿ ಶಾರದಾ ಡಿ. ಶೆಟ್ಟಿ • ಶ್ರೀಮತಿ ಲೀಲಾವತಿ ಐ. • ಶ್ರೀ ಬಾಲಕೃಷ್ಣ ಪಿ., ಜಿಲ್ಲಾ ಕೇಂದ್ರ ಸಹಕಾರಿ ಬ್ಯಾಂಕ್ ಪ್ರತಿನಿಧಿ

ಕಟ್ಟಡ ಸಮಿತಿ: ಅಧ್ಯಕ್ಷರು: ಶ್ರೀ ಎಂ. ದಾಮೋದರ ಗೌಡ ಮದುವೆಗದ್ದೆ । ಸದಸ್ಯರು: • ಶ್ರೀ ರಾಜೇಶ್ ಭಟ್ ನೆಕ್ಕಿಲ • ಶ್ರೀ ಗಂಗಾಧರ ಪಿ. ಎಸ್, • ಶ್ರೀ ಭಾಸ್ಕರ ರಾವ್ ಯು.ವಿ, • ಶ್ರೀ ವೆಂಕಟ್ರಾಮ್ ಯು.ಎಸ್, • ಶ್ರೀ ಚಂದ್ರಶೇಖರ ಗೌಡ ಪಾನತ್ತಿಲ, • ಶ್ರೀ ರತ್ನಾಕರ ಗೌಡ ಬಳ್ಳಡ್ಕ, • ಶ್ರೀ ಶಿವರಾಮ ಗೌಡ ಎಂ.ಪಿ, • ಶ್ರೀ ಶ್ಯಾಮನಾಥ ಪಾನತ್ತಿಲ

ಸೈಂಟ್ ಮೇರಿಸ್ ಇಂಡಸ್ಟ್ರೀಸ್
One Stop Satution for all Your Building Needs
ಎಲಿಮಲೆ ನೆಲ್ಲೂರುಕೆಮ್ರಾಜೆ ಅಂಚೆ ಸುಳ್ಯ ದ.ಕ- 574248
ಇಂಟರ್‌ಲಾಕ್, ಸಾಲಿಡ್ ಬ್ಲಾಕ್, ಸಿಮೆಂಟ್ ಉತ್ಪನ್ನಗಳು, ಸಿಮೆಂಟ್: ಹೋಲ್ ಸೇಲ್& ರಿಟೇಲ್, ಹಾರ್ಡ್‌ವೇರ್, ಸ್ಯಾನಿಟರಿವೇರ್ಸ್, ಪೈಪ್& ಫಿಟ್ಟಿಂಗ್ಸ್ ದೊರೆಯುತ್ತದೆ.
9741489811, 9535808311
stmaryindustrustrygmail.com
ಮ್ಹಾ: ಪಾಪಚ್ಚನ್ ಎಲಿಮಲೆ

ಯು.ವಿ. ಭಾಸ್ಕರ ರಾವ್
ನಿರ್ದೇಶಕರು
ಉಬರಡ್ಕ ಮಿತ್ತೂರು ಪ್ರಾ.ಕೃ.ಪ. ಸಹಕಾರಿ ಸಂಘ

ಸುರೇಶ್ ಎಂ.ಎಚ್.
ನಿರ್ದೇಶಕರು
ಉಬರಡ್ಕ ಮಿತ್ತೂರು ಪ್ರಾ.ಕೃ.ಪ. ಸಹಕಾರಿ ಸಂಘ

ಈಶ್ವರ ಆರ್. ಕಲ್ಚಾರು
ನಿರ್ದೇಶಕರು
ಉಬರಡ್ಕ ಮಿತ್ತೂರು ಪ್ರಾ.ಕೃ.ಪ. ಸಹಕಾರಿ ಸಂಘ

ಶಶಿಧರ ನಾಯರ್
ಸದಸ್ಯರು
ಗ್ರಾಮ ಪಂಚಾಯತ್ ಉಬರಡ್ಕ ಮಿತ್ತೂರು

ಶ್ರೀ ವೈಷ್ಣವಿ ಅನ್ನಪೂರ್ಣ ಕೆಟರಿಂಗ್ಸ್ ಉಬರಡ್ಕ

ನಮ್ಮಲ್ಲಿ ಶುಭ ಸಮಾರಂಭಗಳಿಗೆ ಬೇಕಾಗುವ ಎಲ್ಲಾ ರೀತಿಯ ಸಸ್ಯಹಾರಿ ಹಾಗೂ ಮಾಂಸಾಹಾರಿ ಊಟದ ವ್ಯವಸ್ಥೆಗಳನ್ನು ಕ್ಲಪ್ತ ಸಮಯದಲ್ಲಿ ಮಿತದರದಲ್ಲಿ ಒದಗಿಸಲಾಗುವುದು.
ಶುಚಿ-ರುಚಿ-ಮಿತದರ ನಿತ್ಯ ತಯಾರಿ ನಮ್ಮ ವೈಶಿಷ್ಟ.
ಜೈನರು ಹಾಗೂ ಬ್ರಾಹ್ಮಣ ಭೋಜನಗಳನ್ನು ವ್ಯವಸ್ಥೆ ಮಾಡಿಕೊಡಲಾಗುವುದು
ದಿನೇಶ್ ಬೈತಡ್ಕ : 9164888129, 9591288129

ಅಶ್ವನ್ ಎನ್.ಎಂ
ಸೆಂಟ್ರಿಂಗ್ ಕಂಟ್ರಾಕ್ಟರ್
ನಡುಮುಟ್ಲು ಗಬ್ಬಡ್ಕ
ಮೊ: 8971922016

ಶ್ರೀಪಾದ
ಸಿವಿಲ್ ಇಂಜಿನಿಯರಿಂಗ್ ಕನ್ಸಲ್ಟೆನ್ಸಿ ಸರ್ವೀಸ್
ಪ್ರಥಮ ಮಹಡಿ ಕೆದಂಬಾಡಿ ಕಾಂಪ್ಲೆಕ್ಸ್, ಶ್ರೀರಾಮಪೇಟೆ, ಸುಳ್ಯ
ಶ್ಯಾಮ್‌ಪ್ರಸಾದ್ ಎ.ಡಿ